**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**

**2021–22 ನೇ ಸಾಲಿನ ಅಂತಿಮ ವರ್ಷದ ಬಿ.ಎಸ್ಸಿ. (ಆನರ್ಸ್) ಕೃಷಿ, ಕೃಷಿ ಎಂಜನಿಯರಿಂಗ್ ಮತ್ತು ಬಿ.ಎಸ್ಸಿ. (ಆನರ್ಸ್) ಕೃಷಿ ಮಾರಾಟ ಮತ್ತು ಸಹಕಾರ**

## ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮದ

# ಮೆಲುಕು



team ಅಭೇದ್ಯ

## ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

2021–22 ನೇ ಸಾಲಿನ ಅಂತಿಮ ವರ್ಷದ ಬಿ.ಎಸ್ಸಿ. (ಆನರ್ಸ್) ಕೃಷಿ, ಕೃಷಿ ಎಂಜನಿಯರಿಂಗ್
ಮತ್ತು ಬಿ.ಎಸ್ಸಿ. (ಆನರ್ಸ್) ಕೃಷಿ ಮಾರಾಟ ಮತ್ತು ಸಹಕಾರ

## ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮದ

# ಮೆಲುಕು

# ಪರಿವಿಡಿ


1 ಡೀನ್‌ರವರ ಸಂದೇಶ – 3
2 ಸಂಪಾದಕರ ಸಂದೇಶ – 4
3 ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮ – 5
4 ಅಪ್ಪೇಗೌಡನಹಳ್ಳಿ ಇತಿಹಾಸ – 5
5 ಹಳ್ಳಿ ಹಾಡು – 6
6 ನಮ್ಮೂರ ಶಾಲೆ – 7
7 ರೈತ ಸಂಪರ್ಕ ಕೇಂದ್ರ – 8
8 ಮೊದಲ ದಿನ – 8
9 ಮನೆ ಬಾಗಿಲಿಗೆ – 9
10 ಬೆಳೆ ಸಂಗ್ರಹಾಲಯ – 10
11 ಮಾಹಿತಿ ಕೇಂದ್ರ – 11
12 ಪರಿಚಯ – 12
13 ಬೀಜೋಪಚಾರ – 13
14 ಮಣ್ಣು ಪರೀಕ್ಷೆ – 14
15 ರಾಗಿ ಕರಾಮತ್ತಿನ ಬೆಳೆ – 14
16 ರಾಗಿ ಮಾಲ್ಟ್ ತಯಾರಿಕೆ – 15
17 ಆಹಾರ ಮೌಲ್ಯವರ್ಧನೆ – 15
18 ಕ್ಷೇತ್ರ ಭೇಟಿ – 16
19 ಮಕ್ಕಳಿಗೆ ಪೂರಕ ಆಹಾರ – 16
20 ಮಳೆ ನೀರು ಕೊಯ್ಲು – 17
21 ರೋಸ್ ಡೇ – 17
22 ಶೂನ್ಯಶಕ್ತಿ ಶೀತಲ ಕೋಣೆ – 18
23 ಅಣಬೆ ಬೇಸಾಯ – 18
24 ಹೈನುಗಾರಿಕೆ ಆದಾಯದಲ್ಲಿ ಚೇತರಿಕೆ – 19
25 ದ್ರಾಕ್ಷಿ ರೋಗ ನಿರ್ವಹಣೆ – 20
26 ನ್ಯಾನೋ ಯೋರಿಯಾ – 20
27 ಉತ್ತಮ ಬೀಜೋಪಯೋಗ – 21
28 ಅಜೋಲಾ – 21
29 ಜೇನು ಸಾಕಾಣಿಕೆ – 22
30 ಅಂತರಜಲ ಮರುಪೂರಣ – 22
31 ಬೆಳೆ ಸುರಕ್ಷಾ ಕವಚ ಬೆಳೆ ವಿಮೆ –23
32 ವಿಶ್ವ ಆಹಾರ ದಿನ – 23
33 ಪಶು ಆರೋಗ್ಯ ಚಿಕಿತ್ಸಾ ಶಿಬಿರ – 24
34 ಬೇಕರಿ ತಿನಿಸುಗಳ ತಯಾರಿಕೆ – 25
35 ಎರೆಹುಳು ಗೊಬ್ಬರ – 26
36 ಸ್ವಾತಂತ್ರ್ಯ ದಿನಾಚರಣೆ – 27
37 ವರಮಹಾಲಕ್ಷ್ಮಿ ಹಬ್ಬ – 28
38 ವೀರಗಲ್ಲು ಶಾಸನ – 28
39 ಬಾರಿಸು ಕನ್ನಡ ಡಿಂಡಿಮವ – 29
40 ರೇಷ್ಮೆ ಗಣಪತಿ – 30
41 ನವರಾತ್ರಿಯ ಕೊನೆಯ ದಿನ – 31
42 ಪಾದಯಾತ್ರೆ – 31
43 ಕೃಷ್ಣ ಜನ್ಮಾಷ್ಟಮಿ – 32
44 ಡೈರಿ ಬೋರ್ಡ್ ಮೀಟಿಂಗ್ – 32
45 ಆಡು ಆಟ ಆಡು – 33
46 ರೈತ ನುಡಿಗಳು 34
47 ವಿದ್ಯಾರ್ಥಿ ನುಡಿಗಳು – 36
48 ಫೋಟೋಆಲ್ಬಂ – 38
49 ತಂಡದ ಸದಸ್ಯರು – 40

# ಡೀನ್ (ಕೃಷಿ) ರವರ ಸಂದೇಶ



**ಡಾ. ಎನ್.ಬಿ. ಪ್ರಕಾಶ್**
ಡೀನ್ (ಕೃಷಿ)

ಸ್ಟುಡೆಂಟ್ ರೆಡಿ, ಗ್ರಾಮೀಣ ಉದ್ಯಮಶೀಲತೆ ಜಾಗೃತಿ ಅಭಿವೃದ್ಧಿ ಯೋಜನೆ, ಬೆಂಗಳೂರು ವಿಶ್ವವಿದ್ಯಾನಿಲಯವು ಜಾರಿಗೆ ತಂದಿರುವ ಒಂದು ವಿನೂತನ ಕಾರ್ಯಕ್ರಮವಾಗಿದೆ. ಇದು ಕಲಿಕಾ ಕೇಂದ್ರಿತ ವಿಧಾನವಾಗಿದ್ದು ಇದರಲ್ಲಿ ವಿದ್ಯಾರ್ಥಿಗಳು "ನೋಡಿ ತಿಳಿ" "ಮಾಡಿ ಕಲಿ" ಎಂಬ ತತ್ವ ಪಾಲಿಸುತ್ತಾರೆ. ರಾವೇಯನ್ನು 7ನೇ ಸೆಮಿಸ್ಟರ್‌ನಲ್ಲಿ ಇಟ್ಟುಕೊಂಡಿದ್ದು ಅದು ಮಳೆಗಾಲಕ್ಕೆ ಹೊಂದಿಕೆಯಾಗುವಂತಿದೆ. ರಾವೆಯು ವಿದ್ಯಾರ್ಥಿಗಳ ತಾಂತ್ರಿಕ ಸಾಮರ್ಥ್ಯ ಮತ್ತು ಕ್ಷೇತ್ರ ಸಾಮರ್ಥ್ಯವನ್ನು ಸುಧಾರಿಸಿಕೊಳ್ಳಲು ಸಹಾಯ ಮಾಡುತ್ತದೆ. ಮೊದಲ ಮೂರು ವರ್ಷಗಳು ಸಿದ್ಧಾಂತದಲ್ಲಿ ಉತ್ತಮವಾಗಿರುವ ವಿದ್ಯಾರ್ಥಿಗಳು ಅಂತಿಮ ವರ್ಷದಲ್ಲಿ ಪ್ರಾಯೋಗಿಕ ತರಬೇತಿಯನ್ನು ಪಡೆಯುವ ಅವಕಾಶವನ್ನು ರಾವೇ ಒದಗಿಸುತ್ತದೆ.

ವಿದ್ಯಾರ್ಥಿಗಳು ಪ್ರಮುಖವಾಗಿ ರೈತರೊಡನೆ ಬೆರೆತು ಕೃಷಿ ಮತ್ತು ಕೃಷಿ ಸಂಬಂಧಿತ ಕಾರ್ಯಚಟುವಟಿಕೆಗಳು, ಕ್ಷೇತ್ರ ಭೇಟಿ, ಪ್ರಾತ್ಯಕ್ಷಿಕೆ ಹಾಗೂ ಗುಂಪು ಚರ್ಚೆಗಳ ಆಯೋಜನೆ ಮೂಲಕ ಕೃಷಿಕರಿಗೆ ಆಧುನಿಕ ತಂತ್ರಜ್ಞಾನಗಳ ಮನವರಿಕೆ ಮಾಡಿಕೊಟ್ಟಿರುತ್ತಾರೆ.

ಇದಲ್ಲದೆ ಎರಡು ತಿಂಗಳ ಅವಧಿಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ಅಪ್ಪೇಗೌಡನಹಳ್ಳಿಯಲ್ಲಿ ಕೈತೋಟ, ಬೆಳೆ ಸಂಗ್ರಹಾಲಯ, ಕೃಷಿ ಮಾಹಿತಿ ಕೇಂದ್ರ, ಸಸ್ಯ ಆರೋಗ್ಯ ಕೇಂದ್ರ ತೆರೆಯುವ ಮೂಲಕ ಈ ಗ್ರಾಮದ ರೈತರಲ್ಲಿ ಹೊಸ ಭರವಸೆಯನ್ನು ಮೂಡಿಸಿರುತ್ತಾರೆ..

ಈ ಸಮಯದಲ್ಲಿ ಕೃಷಿ ವಿಶ್ವವಿದ್ಯಾನಿಲಯದ ರಾಯಭಾರಿಗಳಾಗಿ ವಿದ್ಯಾರ್ಥಿಗಳು ಕೃಷಿ ಮತ್ತು ಕೃಷಿಯೇತರ ಕ್ಷೇತ್ರಗಳಲ್ಲಿ ಕೌಶಲ್ಯತೆಯನ್ನು ಹೊಂದಿರುವ ಹಾಗೂ ಕೃಷಿ ಅನುಭವವನ್ನು ಕ್ರೋಢೀಕರಿಸಿಕೊಂಡು ಬಿಡುಗಡೆಗೊಳಿಸುತ್ತಿರುವ "ಮೆಲುಕು" ಪತ್ರಿಕೆಯು ಅವರ ಪ್ರಾಯೋಗಿಕ ಅನುಭವಕ್ಕೆ ಕೈಗನ್ನಡಿಯಾಗಿದೆ. ಈ ಕೋವಿಡ್–19 ಮಹಾಮಾರಿಯ ಸಂದಿಗ್ಧ ಪರಿಸ್ಥಿತಿಯಲ್ಲಿ ಎಲ್ಲಾ ತರಹದ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಿ ಈ ಕಾರ್ಯಕ್ರಮವನ್ನು ಯಶಸ್ಸಿನ ಕಡೆ ಮುನ್ನಡೆಸಲು ಕಾರಣಕರ್ತರಾದ ಕೃಷಿ ವಿಸ್ತರಣಾ ವಿಭಾಗದ ಪ್ರಾಧ್ಯಾಪಕ ವೃಂದ, ವಿವಿಯ ವಿಜ್ಞಾನಿಗಳು, ನನ್ನ ಸಹ ವೃಂದದವರು ರಾವೆ ವಿದ್ಯಾರ್ಥಿಗಳು ಅಲ್ಲದೆ ಅಪ್ಪೇಗೌಡನಹಳ್ಳಿಯ ಗ್ರಾಮಸ್ಥರಿಗೆ ಈ ಮೂಲಕ ನನ್ನ ಹೃದಯಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಹಾಗೆಯೇ ರಾವೆಯ ಇನ್ನುಳಿದ ದಿನಗಳಲ್ಲಿಯೂ ವಿದ್ಯಾರ್ಥಿಗಳು ತಮ್ಮನ್ನು ತಾವು ಎಲ್ಲಾ ತರಹದ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸುತ್ತಾರೆ ಎಂಬ ನಂಬಿಕೆ ಮತ್ತು ಭರವಸೆ ಖಚಿತವಾಗಿದೆ.

ಡೀನ್ (ಕೃಷಿ)

## ಸಂಪಾದಕರ ಸಂದೇಶ



ಡಾ. ವೈ. ಎನ್. ಶಿವಲಿಂಗಯ್ಯ

ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮ (RAWE) ಇದರ ಮುಖ್ಯ ಉದ್ದೇಶ ಕೃಷಿ ಪದವಿ ವಿದ್ಯಾರ್ಥಿಗಳಿಗೆ ರೈತರ ಪರಿಸ್ಥಿತಿ ಅಧ್ಯಯನ ಮಾಡುವುದು, ಕೃಷಿ ಸಮಸ್ಯೆಗಳನ್ನು ಗುರುತಿಸುವುದು, ಸಮಸ್ಯೆಗಳಿಗೆ ಪರಿಹಾರವನ್ನು ಕಂಡು ಹಿಡಿದು ಸೂಕ್ತ ತಂತ್ರಜ್ಞಾನಗಳನ್ನು ವಿವಿಧ ಕೃಷಿ ವಿಸ್ತರಣಾ ಪದ್ಧತಿಗಳಾದ ಗುಂಪು ಸಭೆ, ತರಬೇತಿ, ಪ್ರಾತ್ಯಕ್ಷಿಕೆಗಳು, ಕ್ಷೇತ್ರ ಭೇಟಿ, ಆಂದೋಲನ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳು ಹಳ್ಳಿಗಳಲ್ಲಿ ತಾವೇ ಆಯೋಜಿಸುವುದು.

ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳೇ ಆಯೋಜಿಸಿ "ಮಾಡಿಕಲಿ" ಮತ್ತು "ನೋಡಿ ಕಲಿ" ತತ್ವದ ಆಧಾರದ ಮೇಲೆ ಆಯೋಜಿಸುವುದರಿಂದ ಸಂವಹನ ಕೌಶಲ್ಯದ ಜೊತೆಗೆ ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಲು ಸಹಾಯವಾಗುತ್ತದೆ. ಅಲ್ಲದೇ ವಿದ್ಯಾರ್ಥಿಗಳು ಶಿಸ್ತು, ಸಂಯಮ, ಸೃಜನಶೀಲತೆ, ಜವಾಬ್ದಾರಿ, ಬದ್ಧತೆ ಮತ್ತು ಆತ್ಮವಿಶ್ವಾಸ ಬೆಳೆಸಿಕೊಳ್ಳಲು ಸಹಾಯವಾಗುತ್ತದೆ. ಈ ಅವಧಿಯಲ್ಲಿ ವಿದ್ಯಾರ್ಥಿಗಳು ಮಣ್ಣು ಪರೀಕ್ಷೆ ಮಾದರಿ ತೆಗೆಯುವುದು, ಕೃಷಿ ವಸ್ತು ಪ್ರದರ್ಶನ, ವಿವಿಧ ಬೆಳೆ ಸಂಗ್ರಹಾಲಯ ಸ್ಥಾಪನೆ, ವನಮಹೋತ್ಸವ ಮುಂತಾದ ಚಟುವಟಿಕೆಗಳನ್ನು ಕೈಗೊಳ್ಳುತ್ತಾರೆ. ರೈತರಿಂದ ಸಾಕಷ್ಟು ಕಲಿಯಲು ವಿದ್ಯಾರ್ಥಿಗಳಿಗೆ ಅವಕಾಶವಿದ್ದು ರೈತರು ತಮ್ಮ ಅನುಭವವನ್ನು ಧಾರೆ ಎರೆಯಬೇಕೆಂದು ಕೋರಿಕೊಳ್ಳುತ್ತೇನೆ.

( ಡಾ. ವೈ. ಎನ್. ಶಿವಲಿಂಗಯ್ಯ)



# ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮ



ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮ (RAWE) ಎಂಬುದು ವಿದ್ಯಾರ್ಥಿಗಳಿಗೆ ತಾವು 3 ವರ್ಷಗಳ ಕಾಲ ಕಲಿತ ವಿದ್ಯೆಯನ್ನು ಪ್ರಾಯೋಗಿಕವಾಗಿ 3 ತಿಂಗಳಲ್ಲಿ ಅರಿತುಕೊಳ್ಳಲು ದೊರೆಯುವ ಅದ್ಭುತ ಅವಕಾಶ

ಈ 90 ದಿನಗಳ ವಿಶಿಷ್ಟ ಹಾಗೂ ವಿಭಿನ್ನ ಶಿಬಿರವನ್ನು ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು ಕೃಷಿ ಪದವಿ ವ್ಯಾಸಂಗ ಮಾಡುತ್ತಿರುವ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದು, ಹಳ್ಳಿಯ ಸೊಬಗನ್ನು ಸವಿಯುವ ಹಾಗೂ ಇಲ್ಲಿನ ಜೀವನ ಶೈಲಿ, ಕುಂದು ಕೊರತೆ ಬಗ್ಗೆ ಬೆಳಕು ಚೆಲ್ಲುವ ಮುಖ್ಯ ಭೂಮಿಕೆಯಾಗಿದೆ.

ಈ ಕಾರ್ಯಕ್ರಮದ ಉದ್ದೇಶವೇನೆಂದರೆ ಕೃಷಿ ಹಾಗೂ ಕೃಷಿ ಸಂಬಂಧಿತ ಚಟುವಟಿಕೆಗಳು ಮತ್ತು ಗ್ರಾಮೀಣ ಪರಿಸ್ಥಿಯನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವುದು, ರೈತರ ಸಮಸ್ಯೆಗಳು, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳ ಬಗ್ಗೆ ತಿಳಿಸಿಕೊಡುವುದು, ರೈತರ ತೊಂದರೆಗಳು, ಬೆಳೆ ಕುರಿತು ಮಾಹಿತಿ, ಕೀಟ ಪೀಡೆ ನಿರ್ವಹಣೆ ಮುಂತಾದವುಗಳನ್ನು ಪ್ರಾಯೋಗಿಕವಾಗಿ ತಿಳಿಸಿಕೊಡುವುದು ಆಗಿರುತ್ತದೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಕೃಷಿ ವಿಸ್ತರಣಾ ವಿಭಾಗ, ಕೃಷಿ ಇಲಾಖೆ ಹಾಗೂ ಗ್ರಾಮಸ್ಥರ ಸಹಕಾರದೊಂದಿಗೆ ಸುಮಾರು 433 ಕೃಷಿ ಮತ್ತು ಕೃಷಿಯೇತರ ವಿದ್ಯಾರ್ಥಿಗಳನ್ನು ಬೆಂಗಳೂರು ಗ್ರಾಮಾಂತರ, ದೊಡ್ಡಬಳ್ಳಾಪುರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ 18 ಹಳ್ಳಿಗಳಲ್ಲಿ ಯಾವುದೇ ಕುಂದು ಕೊರತೆಗಳಿಲ್ಲದೆ ವಾಸ್ತವ್ಯ ಹೂಡಲು ಅನುವು ಮಾಡಿಕೊಟ್ಟಿರುತ್ತಾರೆ.

# ಅಪ್ಪೇಗೌಡನಹಳ್ಳಿ ಇತಿಹಾಸ




ಅಪ್ಪೇಗೌಡನಹಳ್ಳಿ ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ಹಂಡಿಗನಾಳ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಸೇರುತ್ತದೆ. ಈ ಹಳ್ಳಿಯು ಸುಮಾರು 1200 ವರ್ಷಗಳ ಸುದೀರ್ಘ ಇತಿಹಾಸವನ್ನು ಹೊಂದಿದೆ. ಅಪ್ಪೇಗೌಡನಹಳ್ಳಿ ಎಂಬ ಹೆಸರು ಅಪ್ಪಣ್ಣ ಹಾಗೂ ಕೆಂಪೇಗೌಡರಿಂದ ಬಂದಿದೆ. ಈ ಊರಿನಲ್ಲಿ ಹಿಂದೂ ಮುಸ್ಲೀಂ ಸೇರಿ ಭಾವೈಕ್ಯತೆಯ ಹಬ್ಬ "ಬಾಬಯ್ಯನ ಹಬ್ಬ"ವನ್ನು ಸುಮಾರು ವರ್ಷಗಳ ಹಿಂದೆ ಆಚರಿಸುತ್ತಿದ್ದರು. ಪಂಡರಾಪುರ ಭಜನೆಯನ್ನು ಸಹ ಆಯೋಜಿಸುತ್ತಿದ್ದರು. ಹಳ್ಳಿಯಲ್ಲಿ ಕುಂಟೆ, ವೀರಗಲ್ಲು, ಶಾಸನಗಳು, ಮಠಗಳು, ವೀರಾಂಜನೇಯ ಸ್ವಾಮಿ ದೇವಸ್ಥಾನ, ಗಂಗಮ್ಮ ದೇವಸ್ಥಾನಗಳಿವೆ. ಹಿರಿಯರು ಕೋಲಾಟ, ಹರಿಕಥೆ, ನಾಟಕ, ರಾಮಕೋಟಿ ಭಜನೆ, ರಾಮದಂಡುವನ್ನು ಕೈಗೊಳ್ಳುತ್ತಿದ್ದರು. ಈ ಹಳ್ಳಿಗೆ ಶೌರ್ಯ ಪ್ರಶಸ್ತಿ ಹಾಗೂ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ. ಗಂಗನಹಳ್ಳಿ, ಕಡಶೀಗೇನಹಳ್ಳಿ, ಕೇಶವಾರ, ಕಂಬದಹಳ್ಳಿಗಳಿಂದ ಸುತ್ತುವರೆದಿದೆ.

ಮೆಲುಕು

# ಹಳ್ಳಿ ಹಾಡು

ಅನುಭವ ಅನ್ವೇಷಿತರು ನಾವು ಬಂದಿಳಿದೆವು ಇಲ್ಲಿಗೆ
ಸಿಲ್ಕ್ ಮಿಲ್ಕ್‌ಗೆ ಪ್ರಸಿದ್ಧಿಯಾದ ಅಪ್ಪೇಗೌಡನಹಳ್ಳಿಗೆ

ಇಲ್ಲಿ ನಮಗೆ ಅಮೋಘವೆನಿಸಿದ್ದು ನಮ್ಮೂರ ಶಾಲೆ
ಮುಂದಿನ ಮೂರು ತಿಂಗಳು ಇಲ್ಲೇ ನಮ್ಮ ನೆಲೆ

ಕೇಳಿ ಬಂದರು ಊರಜನ ನಮ್ಮ ಟ್ರೋಲಿಯ ಸೌಂಡು
ಸ್ವಾಗತಿಸಿದರು ನಮ್ಮೆಲ್ಲರನು ಅಪ್ಪಿ ಬೆರಗಾದೆವು ಆ ಪ್ರೀತಿ ಕಂಡು
ಮೂಡಿತು ಹೀಗೆ ನಮ್ಮ ಅವರ ನಡುವೆ ಒಂದು ಅಪೂರ್ವ ಬಾಂಡು

ಊರಿನ ಅದ್ಭುತ ಸೆಳೆತವೆಂದರೆ ಇಲ್ಲಿನ ಮಕ್ಕಳು
ಇಟ್ಟೇ ಬಿಟ್ಟರು ನಮಗೆಲ್ಲಾ ಒಂದೊಂದು ಟೈಟ್ಲು

ಮರೆಸಿದರು ನಮ್ಮ ಮನೆಯನ್ನ ಕರೆದು ಪ್ರತಿ ಹಬ್ಬಕ್ಕೂ
ಊರಿನ ತುಂಬಾ ಜಿಕೆವಿಕೆ ಸ್ಟೂಡೆಂಟ್ಸ್‌ದೇ ಥಳಕ್ಕೂ

ತೋರಿಸಿಕೊಟ್ಟ ಹಾಗೇ ಮಾಡಿದರೂ ಎಲ್ಲರ ಮನೆಯಲ್ಲೂ ರಾಗಿ ಮಾಲ್ಟ್
ಕೇಕ್ ಗುಲ್‌ಕನ್ ಮಾಡಿಕೊಟ್ಟರು ಅದರಲ್ಲೂ ಒಂದು ಟ್ವಿಸ್ಟ್

ಎಷ್ಟು ಹೊಗಳಿದರೂ ಸಾಕಾಗಲ್ಲ ಈ ಊರು ತುಂಬಾ ಸ್ವೀಟೆಸ್ಟು
ಮರೆಯಲಾಗದ ಅನುಬಂಧ ನಮ್ಮ ಇವರ ನಂಟು



# ನಮ್ಮೂರ ಶಾಲೆ



















## ರೈತ ಸಂಪರ್ಕ ಕೇಂದ್ರ

ರೈತ ಸಂಪರ್ಕ ಕೇಂದ್ರವು ಪ್ರತಿ ಹೋಬಳಿಯಲ್ಲೂ ರೈತರಿಗೆ ಅವಶ್ಯಕ ತಾಂತ್ರಿಕ ಸಲಹೆ ಮತ್ತು ಮಾರ್ಗದರ್ಶನ ನೀಡುವ ಕೇಂದ್ರವಾಗಿದೆ, ನಮಗೆ, ಸಮೀಪದಲ್ಲಿರುವ ರೈತ ಸಂಪರ್ಕ ಕೇಂದ್ರಕ್ಕೆ ಹೋಗಿ ಕಲಿಯಲು ಅವಕಾಶ ದೊರೆಯಲು ಮುಖ್ಯ ಕಾರಣವೇ **RAWE**. ದಿನಕ್ಕೆ ಇಬ್ಬರಂತೆ ಪ್ರತಿ ದಿನವು ವಿದ್ಯಾರ್ಥಿಗಳು ರೈತ ಸಂಪರ್ಕ ಕೇಂದ್ರಕ್ಕೆ ಭೇಟಿ ನೀಡಿ ಇಲ್ಲಿನ ಕೆಲಸ ಕಾರ್ಯಗಳಲ್ಲಿ ಭಾಗಿಯಾಗಿರುತ್ತಾರೆ.

ರೈತ ಸಂಪರ್ಕ ಕೇಂದ್ರದಲ್ಲಿ ಬೆಳೆ ಆಯ್ಕೆ, ಬೆಳೆ ಉತ್ಪಾದನಾ ಕಾರ್ಯಕ್ರಮಗಳು, ಮಾರುಕಟ್ಟೆ ಮಾಹಿತಿ, ಮುಂತಾದ ವಿಷಯಗಳ ಬಗ್ಗೆ ಆಧುನಿಕ ಮಾಹಿತಿ ನೀಡಲಾಗುವುದು, ಕೃಷಿ ಸಲಕರಣೆಗಳಾದ ಬೀಜ, ರಸಗೊಬ್ಬರ, ಸಸ್ಯ ಸಂರಕ್ಷಣೆ ಔಷಧಿಗಳು ಮತ್ತಿತರ ಪರಿಕರಗಳನ್ನು ಒದಗಿಸಲು ಸಂಯೋಜನೆ ಮಾಡಲಾಗುವುದು. ರೈತ ಸಂಪರ್ಕ ಕೇಂದ್ರದ ಮುಖ್ಯಸ್ಥರು ಹಾಗೂ ಅಕೌಂಟೆಂಟ್‌ರವರ ಸಹಕಾರವು ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾಗಿದೆ.

## ಮೊದಲ ದಿನ















# ಮನೆ ಬಾಗಿಲಿಗೆ

ಮರಳಿ ಹೋದೆವು
ರೈತರ ಬಾಗಿಲಿಗೆ
ಕಾಣಲಿಲ್ಲ ಅವರು ನಮ್ಮನ್ನು
ಅಪರಿಚಿತರ ಹಾಗೆ

ಕೇಳಿದೆವು ಆಂಟೀ ಮನೆಯಲ್ಲಿ
ಕುರಿ ಕೋಳಿ ಹಸು ಇದೆಯಾ ಅಂತ
ಬೇಜಾರಾಗದೇ ಹೇಳಿದರು
ಹೌದು ಹೌದು ಅಂತ

ಲೆಕ್ಕ ಹಾಕಿದೆವು ಜನ ಮನೆ ಹೊಲ ಹಸು
ಕುರಿ ಕೋಳಿ ಟ್ರಾಕ್ಟರ್ ಟಿಲ್ಲರ್‌ಗಳನ್ನು
ಸಂಗ್ರಹಿಸಿದೆವು ಈ ಊರಿನ
ಸಂಪೂರ್ಣ ಮಾಹಿತಿಯನ್ನು






# ಬೆಳೆ ಸಂಗ್ರಹಾಲಯ







ರಾವೆಯ ಬಹುಮುಖ್ಯ ಅಂಗವೆಂದರೆ ಅದು ಕೃಷಿ ಪ್ರಾತ್ಯಕ್ಷಿಕೆ. ಕೃಷಿ ವಿದ್ಯಾರ್ಥಿಗಳಾದ ನಾವು ನಮ್ಮ ಕೃಷಿ ಪ್ರಾತ್ಯಕ್ಷಿಕೆ ತಾಕುಗಳಲ್ಲಿ ವಿವಿಧ ಧಾನ್ಯಗಳು, ತರಕಾರಿಗಳು ಮತ್ತು ಮೇವಿನ ಬೆಳೆಗಳನ್ನು ಬೆಳೆಯುತ್ತಿದ್ದೇವೆ. ಸುಮಾರು 18 ಏಕದಳ ಧಾನ್ಯಗಳು, 12 ದ್ವಿದಳ ಧಾನ್ಯಗಳು, 10 ಈ ಹೆಚ್ಚು ತರಕಾರಿ ತಾಕುಗಳನ್ನು ಸೇರಿ 50ಕ್ಕೂ ಹೆಚ್ಚು ತಾಕುಗಳನ್ನು ನಿರ್ವಹಿಸುತ್ತಿದ್ದೇವೆ. ಈ ತಾಕುಗಳಲ್ಲಿ ಹಳ್ಳಿಯ ಪ್ರಮುಖ ಬೆಳೆಗಳಾದ ರಾಗಿ, ತರಕಾರಿಗಳು, ಜೋಳ, ಸೊಪ್ಪುಗಳಿಂದ ಹಿಡಿದು ಇಲ್ಲಿ ಬೆಳೆಯದೇ ಇರುವ ಬೆಳೆಗಳಾದ ಹುಚ್ಚೆಳ್ಳು, ಸೋಯಾ ಅವರೆ, ಹರಳು, ಇವುಗಳನ್ನು ಬೆಳೆದು ತೋರಿಸುವ ಪ್ರಯತ್ನ ಮಾಡುತ್ತಿದ್ದೇವೆ. ಇದರಿಂದ ರೈತರಿಗೆ ಇರುವ ಅವಕಾಶಗಳ ಮಾಹಿತಿಯನ್ನು ನೀಡುತ್ತಾ ಈ ಬೆಳೆಗಳನ್ನು ಬೆಳೆಯಲು ಉತ್ತೇಜನ ನೀಡುವ ಉದ್ದೇಶವನ್ನು ಹೊಂದಿದ್ದೇವೆ. ಕೃಷಿ ಪ್ರಾತಕ್ಷಿಕೆ ತಾಕುಗಳಲ್ಲಿ ಸಮಗ್ರ ಕೃಷಿ ಪದ್ಧತಿಯನ್ನು ಪಾಲಿಸುತ್ತಾ ಸಮಗ್ರ ಕೀಟ ಮತ್ತು ರೋಗ ನಿರ್ವಹಣೆಯನ್ನು ಸಮಯಕ್ಕೆ ಸರಿಯಾಗಿ ಮಾಡುತ್ತಿದ್ದೇವೆ.

ಬೆಳೆಗಳಷ್ಟೇ ಅಲ್ಲದೆ ಎರೆಹುಳು ಗೊಬ್ಬರ, ಅಜೊಲ್ಲಾ ಕೃಷಿ, ಶೂನ್ಯ ಶಕ್ತಿ ಶೀತಲ ಕೋಣೆ, ಮತ್ತಿತರ ಮಾಡೆಲ್‌ಗಳನ್ನು ಚಿಕ್ಕದಾಗಿ ಮಾಡಿ ರೈತರಿಗೆ ಹೊಸ ತಂತ್ರಜ್ಞಾನಗಳನ್ನು ಪರಿಚಯಿಸುತ್ತಿದ್ದೇವೆ.








## ಮಾಹಿತಿ ಕೇಂದ್ರ



ಅಪ್ಪೇಗೌಡನಹಳ್ಳಿಯ ಮುಖ್ಯ ಬೆಳೆಗಳ ಬಗ್ಗೆ ಮಾಹಿತಿ, ಆಧುನಿಕ ತಂತ್ರಜ್ಞಾನಗಳು ಮತ್ತು ರೈತರಿಗೆ ಉಪಯುಕ್ತವಾಗುವಂತಹ ಹಲವಾರು ಮಾಹಿತಿಗಳು ನಮ್ಮ ಕೃಷಿ ಮಾಹಿತಿ ಕೇಂದ್ರದಲ್ಲಿ ದೊರೆಯುತ್ತವೆ.

ಕೃಷಿ ಮಾಹಿತಿ ಕೇಂದ್ರವನ್ನು ಸಾಮಾನ್ಯ ಸಭೆಯ ನಂತರ 12.08.2021 ರಂದು ಗ್ರಾಮಸ್ಥರ ಸಮ್ಮುಖದಲ್ಲಿ ಡಾ॥ ವೈ.ಎನ್. ಶಿವಲಿಂಗಯ್ಯ ಮತ್ತು ಡಾ.ಸಿ. ನಾರಾಯಣಸ್ವಾಮಿ ರವರಿಂದ ಉದ್ಘಾಟಿಸಲಾಯಿತು. ಕೃಷಿ ಮಾಹಿತಿ ಕೇಂದ್ರವು ವಾರದ ಏಳು ದಿನಗಳು ರೈತರಿಗಾಗಿ ತೆರೆದಿರುತ್ತದೆ. ಕೃಷಿ ಮಾಹಿತಿ ಕೇಂದ್ರದಲ್ಲಿ ನಾವು ಹಲವು ಸಂಜೆ ಸಭೆಗಳನ್ನು ಏರ್ಪಡಿಸಿ ರೈತರಿಗೆ ಉಪಯುಕ್ತ ಮಾಹಿತಿಗಳನ್ನು ನೀಡುತ್ತಾ ನಮಗೆ ತಿಳಿಯದಿರುವ ಮಾಹಿತಿಗಳನ್ನು ರೈತರಿಂದ ಪಡೆದುಕೊಳ್ಳುತ್ತೇವೆ,

ಕೃಷಿ ಮಾಹಿತಿ ಕೇಂದ್ರದಲ್ಲಿ ಹಲವು ವಿಷಯಗಳ ಮೇಲೆ ಚಾರ್ಟ್, ಪೋಸ್ಟರ್, ಮತ್ತಿತರ ಮಾಡೆಲ್‌ಗಳನ್ನು ಮಾಡಿ ಹಾಕಿದ್ದೇವೆ. ಉದಾಹರಣೆಗೆ ಬೀಜೋಪಚಾರ, ಅಣಬೆ ಬೇಸಾಯ, ಗ್ರಾಮ ನಕ್ಷೆ, ಮಣ್ಣಿನ ಮಾದರಿ ಸಂಗ್ರಹಣೆ, ಎರೆ ಹುಳು ಗೊಬ್ಬರ ತಯಾರಿಕೆ ಮುಂತಾದ ವಿಷಯಗಳ ಬಗ್ಗೆ ಮಾಹಿತಿ ಲಭ್ಯವಿರುತ್ತವೆ.








# ಪರಿಚಯ



ಭೂಮಿಗೆ ಮಳೆಯ ಪರಿಚಯದಂತೆ
ಅರಳಿದ ಹೂವಿಗೆ ದುಂಬಿಯ ಪರಿಚಯದಂತೆ
ಹೊಳೆಗೆ ಮೀನಿನ ಪರಿಚಯದಂತೆ
ನಮ್ಮ-ನಿಮ್ಮೆಲ್ಲರ ಪರಿಚಯ ಸೃಷ್ಟಿಸಲಿ ಒಂದು ವಿಸ್ಮಯ
ಇದುವೇ ನಮ್ಮ ಆಶಯ

ಅರಳಿತು ವೇದಿಕೆಯ ಮೆರಗು ಮಡಿಕೆ ಕಳಶದಿಂದ
ಮೂಡಿತು ಸಮಾರಂಭ ಅಡಿಕೆ ಪಟ್ಟೆಯ ಕಲಾಕೃತಿಯಿಂದ
ಬೋರ್ಡ್ ಮೀಟಿಂಗ್ ತರ ಇದೆಯೆಂದು ಡೀನ್ ಹೇಳಿದರು ಮೆಚ್ಚುಗೆಯಿಂದ
ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿದೆವು ಕಾರ್ಯಕ್ರಮ ಹುರುಪಿನಿಂದ

ಉತ್ತೇಜಿಸಿದರು ಕಾರ್ಯಕ್ರಮ ಅಲ್ಲೊಬ್ಬ ಜನಪದ ಕಲೆಗಾರ
ನಿರೂಪಣೆ ಸ್ವಾಗತ ವಂದನಾರ್ಪಣೆಯವರೆಗೂ ನಮ್ಮದೇ ರಾಜ್ಯಭಾರ
ಡೀನ್ ಮಾತಾಡಿ ಹೊಗಳಿದರು ನಮ್ಮ ಕಾರ್ಯ ವೈಖರಿಯನ್ನ
ಶಿವಲಿಂಗಯ್ಯ ಸರ್ ಮಾತಾಡಿ ತಿಳಿಸಿದರು ರಾಗಿಯ ಮಹತ್ವವವನ್ನ

ಮಾಡಿಕೊಂಡೆವು ವಿಭಿನ್ನವಾಗಿ ನಮ್ಮ ಪರಿಚಯ
ಮಾಡಿತು ಅದು ಎಲ್ಲರನ್ನು ತನ್ಮಯ
ಮುಗ್ಧತೆ ಈ ಊರಿನ ಜನರ ಸ್ವಭಾವ
ಮರೆಯಲಾಗದು ಇಂಥದ್ದೊಂದು ಅನುಭವ



# ಬೀಜೋಪಚಾರ

ಬಂದಿರುವೆವು ನಾವು ರೈತರಿಗೆ ಕೃಷಿ ತಂತ್ರಜ್ಞಾನ ತಲುಪಿಸಲು
ಮಾಡಿದೆವು ಸಂಜೆ ಸಭೆ ಬೀಜೋಪಚಾರದ ಬಗ್ಗೆ ತಿಳಿಸಲು

ದೇವಸ್ಥಾನದ ಬಳಿ ಏರ್ಪಡಿಸಿದೆವು ಕಾರ್ಯಕ್ರಮವನ್ನು
ರಂಗೋಲಿ ಹಾಕಿ ಕೋರಿದೆವು ಎಲ್ಲಾರಿಗೂ ಸುಸ್ವಾಗತವನ್ನು

ಬಳಸಿ ಅಝೋಟೋ ಬ್ಯಾಕ್ಟರ್ ಏಕದಳ ಧಾನ್ಯಗಳಿಗೆ
ಹಾಕಿ ರೈಝೋಬಿಯುಮ್ ದ್ವಿದಳ ಧಾನ್ಯಗಳಿಗೆ

ಅಝೋಟೋ ಬ್ಯಾಕ್ಟರ್ ಮತ್ತು ಪಿಎಸ್‌ಬಿ ಬಳಸಿ ಎಣ್ಣೆ ಕಾಳುಗಳಿಗೆ
ನಮ್ಮ ಮಾಹಿತಿ ಪಾಲಿಸಿದರೆ ಆಗುವುದು ಇಳುವರಿಯ ಏಳಿಗೆ

ಮಾಡಿ ತೋರಿಸಿದೆವು ಅವರೆಯ ಜೊತೆ ರೈಝೋಬಿಯುಮ್ ಉಪಚಾರವನ್ನು
ಮಾಡಿ ನೋಡಿ ಬೀಜೋಪಚಾರ ಬೀಜ ಹಾಕುವ ಮುನ್ನ






## ಮಣ್ಣು ಪರೀಕ್ಷೆ





ಎಕರೆಗೆ ಎಂಟರಿಂದ ಹತ್ತು ಜಾಗದಲ್ಲಿ ಜಿಗ್‌ಜಾಗ್ ಮಾದರಿಯಲ್ಲಿ ನಡೆದಾಡಿ ಮಣ್ಣು ಸಂಗ್ರಹಿಸಬೇಕು.
ಸಂಗ್ರಹಿಸಬಾರದ ಸ್ಥಳಗಳು

- ಗೊಬ್ಬರ ಗುಂಡಿ
- ಮರದ ಕೆಳಗೆ
- ತಿರುಗಾಡುವ ದಾರಿ
- ಕಾಲುವೆ ಪಕ್ಕ

ಇಂಗ್ಲೀಷಿನ ವಿ ಅಕ್ಷರದ ಆಕೃತಿಯಲ್ಲಿ ಗುಂಡಿ ತೆಗೆಯಬೇಕು.
ಕೃಷಿ ಬೆಳೆಗಳಿಗೆ ಎಂಟರಿಂದ ಒಂಭತ್ತು ಜಾಗದಲ್ಲಿ ಮಣ್ಣು ಮಾದರಿ ತೆಗೆಯಬೇಕು.
ತೋಟಗಾರಿಕಾ ಬೆಳೆಗಳಿಗೆ ಹತ್ತರಿಂದ ಹನ್ನೆರಡು ಜಾಗದಲ್ಲಿ ಮಣ್ಣು ಮಾದರಿ ತೆಗೆಯಬೇಕು.
ಮಣ್ಣು ಮಾದರಿ ಪರೀಕ್ಷೆಗೆ ನೀಡಬೇಕಾದ ಮಾಹಿತಿ :

1) ಹೆಸರು :
2) ಗ್ರಾಮ :
3) ಸರ್ವೇ ನಂಬರ್ :
4) ಹಿಂದಿನ ಬೆಳೆ :
5) ಮುಂದಿನ ಬೆಳೆ :
6) ಎಫ್‌ಐಡಿ :
7) ಬಳಸಿದ ಗೊಬ್ಬರದ ಪ್ರಮಾಣ :

## ರಾಗಿ-ಕರಾಮತ್ತಿನ ಬೆಳೆ

ಕಾಕತಾಳೀಯದಂತೆ ಎಂಜನಿಯರ್‌ಸ್ ಡೇ ದಿನದಂದು ಕ್ಷೇತ್ರ ಭೇಟಿ ನೀಡಿದ ಎಂಜನಿಯರಿಂಗ್ ಪ್ರೊಫೇಸರರಿಗೆ ಗಿಡ ಕೊಡುವ ಮೂಲಕ ಎಂಜನಿಯರ್‌ಸ್ ಡೇ ಆಚರಿಸಿದೆವು.
ರಾಗಿ ತಿಂದವ ನಿರೋಗಿ. ಈ ಪ್ರದೇಶದಲ್ಲಿ ರೇಷ್ಮೆ, ದ್ರಾಕ್ಷಿ, ಬಿಟ್ಟು ಮಳೆಗಾಲದಲ್ಲಿ ಬೆಳೆಯುವ ಮುಖ್ಯ ಆಹಾರ ಬೆಳೆ ಎಂದರೆ ರಾಗಿ. ರಾಗಿಯಿಂದ ಮಾಡುವ ಮುಖ್ಯ ಆಹಾರಪದಾರ್ಥಗಳೆಂದರೆ ಮುದ್ದೆ, ಅಂಬಲಿ, ರಾಗಿರೊಟ್ಟಿ, ಬಿಸ್ಕೆಟ್, ಮಾಲ್ಟ್ ಹಾಗೂ ಇತರೆ. ಇಂಥಹ ರಾಗಿಯ ಇತಿಹಾಸ ಹಾಗೂ ಅದರಲ್ಲಿರುವ ಪೋಷಕಾಂಶಗಳ ಬಗ್ಗೆ ತಿಳಿಸಿಕೊಟ್ಟು ತದನಂತರ ಸಮಗ್ರ ಕೈಪಿಡಿಯನ್ನು ತಿಳಿಸಿದೆವು.

ಇಲ್ಲಿ ರಾಗಿ ಬೆಳೆ ಇಳುವರಿ ಕಮ್ಮಿಯಾಗಲು ಕಾರಣಗಳು ಹಾಗೂ ಅದಕ್ಕೆ ಸೂಕ್ತ ಪರಿಹಾರವನ್ನು ಗ್ರಾಮದಲ್ಲಿನ ರಾಗಿ ಬೆಳೆಗಾರರಿಗೆ ನಾವು ಸಂಜೆ ಸಭೆಯಲ್ಲಿ ತಿಳಿಸಿಕೊಟ್ಟೆವು.





## ರಾಗಿ ಮಾಲ್ಟ್ ತಯಾರಿಕೆ





ರಾಗಿ ಮಾಲ್ಟ್ ತಯಾರಿಕೆ

ಅಪ್ಪೇಗೌಡನಹಳ್ಳಿಯ ಪ್ರಮುಖ ಬೆಳೆಯಾದ ರಾಗಿಯು ಈ ಹಳ್ಳಿಯಲ್ಲಿ ಸಿಗುವ ಒಂದು ಅತ್ಯುನ್ನತ ಸಂಪತ್ತು. ಹಳ್ಳಿಯ ಜನರು ಸಾಮಾನ್ಯವಾಗಿ ರಾಗಿ ಮುದ್ದೆ ಮತ್ತು ಗಂಜಿಯನ್ನು ಮಾತ್ರ ಮಾಡುತ್ತಿದ್ದರು. ಈ ವಿಷಯವನ್ನು ಗಮನಿಸಿದ ವಿದ್ಯಾರ್ಥಿಗಳು ಅಹಾರ ವಿಜ್ಞಾನ ವಿಭಾಗದ ಡಾ. ಶಮಶದ್ ಬೇಗಂ ಅವರ ಮಾರ್ಗದರ್ಶನದಲ್ಲಿ ರಾಗಿಯ ಮೌಲ್ಯವರ್ಧನೆ ಮಾಡುವ ತಯಾರಿ ಮಾಡಿದರು. ರೈತ ಮಹಿಳೆಯರಿಗೆ ಮೌಲ್ಯವರ್ಧನೆಯ ಮಹತ್ವ ಮತ್ತು ಉಪಯೋಗಗಳ ಬಗ್ಗೆ ಹಲವು ಉದಾಹರಣೆಗಳೊಂದಿಗೆ ತಿಳಿಸಿಕೊಡಲಾಯಿತು.

ನಂತರ ಡಾ॥ ವೈ.ಎನ್. ಶಿವಲಿಂಗಯ್ಯರವರು ನೆರೆದಿದ್ದ ಜನರನ್ನು ಉದ್ದೇಶಿಸಿ ಮಾತನಾಡುತ್ತಾ, ಆಹಾರ ಪದಾರ್ಥಗಳ ಮೌಲ್ಯವರ್ಧನೆ ಮಾಡಲು ಇರುವ ಅವಕಾಶಗಳನ್ನು ಹಾಗೂ ಅದರಿಂದ ಹೇಗೆ ಪೌಷ್ಟಿಕತೆಯನ್ನು ಹೆಚ್ಚಿಸಿ ಮಕ್ಕಳ ಆರೋಗ್ಯವನ್ನು ಕಾಪಾಡಬಹುದು ಎಂದು ಹೇಳಿದರು. "ರಾಗಿ ತಂದೀರಾ ಭಿಕ್ಷೆಗೆ ರಾಗಿ ತಂದೀರಾ" ಎಂಬ ಸಾಲುಗಳನ್ನು ಹೇಳುತ್ತಾ ಡಾ. ಶಮಶದ್ ಬೇಗಂ ರವರು ರಾಗಿ ಮತ್ತು ನವಧಾನ್ಯಗಳ ಲಭ್ಯತೆ ಮತ್ತು ಉಪಯೋಗಗಳ ಬಗ್ಗೆ ಜನರಿಗೆ ಅರಿವು ಮೂಡಿಸಿದರು. ರಾಗಿ ಮಾಲ್ಟ್ ಮಾಡುವ ವಿಧಾನವನ್ನು ಜನರಿಗೆ ವಿವರಿಸಿ ರಾಗಿಮಾಲ್ಟ್ ಪುಡಿ, ಹಾಲು ಹಾಗೂ ಸಕ್ಕರೆಯನ್ನು ಉಪಯೋಗಿಸಿ ರಾಗಿ ಮಾಲ್ಟ್ ಮಾಡುವ ಪ್ರಕ್ರಿಯೆಯನ್ನು ನೆರೆದಿದ್ದ ಗ್ರಾಮಸ್ಥರಿಗೆ ತೋರಸಲಾಯಿತು. ಇದನ್ನು ಸೇವಿಸಿದ ಗ್ರಾಮಸ್ಥರು ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿ ಹಲವರು ಇದನ್ನು ಪ್ರಯತ್ನಿಸುವುದಾಗಿ ಹೇಳಿದರು. ಜನರ ಮೆಚ್ಚುಗೆಯನ್ನು ಪಡೆದುಕೊಂಡು ಸಂಪನ್ನವಾದ ಈ ಕಾರ್ಯಕ್ರಮದಿಂದ ವಿದ್ಯಾರ್ಥಿಗಳ ಮನದಲ್ಲೂ ಸಂತಸ ಮೂಡಿತು.

## ಆಹಾರ ಮೌಲ್ಯವರ್ಧನೆ

ಆಹಾರ ಮೌಲ್ಯವರ್ಧನೆ ಬಗ್ಗೆ ಚರ್ಚಿಸಿದ ನಾವು ಈ ಪ್ರದೇಶದ ಮುಖ್ಯ ಬೆಳೆಯಾದ ದ್ರಾಕ್ಷಿಯಲ್ಲಿ ಏನಾದರೂ ವಿಶೇಷವಾಗಿ ಮಾಡಬೇಕು ಎಂದು ಅಂದುಕೊಂಡಾಗ ಜ್ಯೂಸ್ ಮಾಡುವ ವಿಚಾರ ನಮ್ಮ ತಲೆಗೆ ಬಂದಿತು. ಎಲ್ಲ ಗೃಹಿಣಿಯರು ಹಾಗೂ ಗ್ರಾಮಸ್ಥರನ್ನು ಕರೆದು ದ್ರಾಕ್ಷಿ ಜ್ಯೂಸ್ ಮಾಡುವ ಪರಿಯನ್ನು ಹೇಳಿಕೊಟ್ಟೆವು. ಹಾಲನ್ನು ಹೆಚ್ಚಾಗಿ ಉತ್ಪಾದಿಸುವ ಈ ಹಳ್ಳಿಯಲ್ಲಿ ಬಳಸಿ ಉಳಿದಿರುವ ಹಾಲಿನಿಂದ ಪನ್ನೀರನ್ನು ಕೂಡ ಮಾಡಬಹುದು ಎಂದು ತೋರಿಸಿಕೊಟ್ಟೆವು. ಅದೇ ರೀತಿಯಾಗಿ ಪಪ್ಪಾಯ ಹಣ್ಣಿನಲ್ಲಿ ಟೂಟಿಫ್ರೂಟಿ ಮಾಡಿದ್ದು ಕೂಡ ಒಂದು ಖುಷಿಯ ವಿಚಾರ!



## ಕ್ಷೇತ್ರ ಭೇಟಿ




ಕಾರ್ಯಕ್ರಮದ ಭಾಗವಾಗಿ ಕೀಟಶಾಸ್ತ್ರ ತಜ್ಞರಾದ ಡಾ. ಮುರಳಿ ಮೋಹನ್ ಹಾಗೂ ಕೃಷಿ ವಿಸ್ತರಣಾ ವಿಭಾಗದ ಪ್ರಾಧ್ಯಾಪಕರಾದ ಡಾ. ಶಿವಲಿಂಗಯ್ಯ ಅವರು ಕ್ಷೇತ್ರ ಭೇಟಿ ನೀಡಿ ರೈತರ ಸಮಸ್ಯೆಗಳನ್ನು ವಿವಿಧ ಬೆಳೆಗಳನ್ನು ಪರಿಶೀಲಿಸಿದರು.ಕ್ಷೇತ್ರ ಭೇಟಿಯಲ್ಲಿ ಟಮೋಟೋ ಬೆಳೆಗಾರರರಾದ ತ್ಯಾಗರಾಜ ಅವರ ಜಮೀನಿಗೆ ಭೇಟಿ ನೀಡಿ ಬೆಳೆಯನ್ನು ಪರಿಶೀಲಿಸಿ ಶಿಲೀಂಧ್ರ ಸಮಸ್ಯೆ, ವೈರಸ್ ರೋಗಗಳ ಬಗ್ಗೆ ಸಲಹೆ ನೀಡಿದರು.

ಮೆಣಸಿನ ಕಾಯಿ ಬೆಳೆಗಾರರಾದ ಅಂಬರೀಷ್‌ರವರ ಜಮೀನಿಗೆ ಭೇಟಿ ನೀಡಿ ಕೀಟಪೀಡೆಗಳ ನಿರ್ವಹಣೆಯ ಬಗ್ಗೆ ಸಲಹೆ ನೀಡಿದರು. ಹೀರೆಕಾಯಿ ತೋಟಕ್ಕೆ ಭೇಟಿ ನೀಡಿ, ಅಲ್ಲಿ ಕಾಡುತ್ತಿದ್ದ ಹಣ್ಣಿನ ನೊಣ (ಬ್ಯಾಕ್ಟೊಸೆರಾ ಡೊರ್ಸಾಲೀಸ್) ಸಮಸ್ಯೆಗೆ ಹಣ್ಣಿನ ನೊಣದ ಮೋಹಕಬಲೆ ಹೆಚ್ಚು ಪರಿಣಾಮಕಾರಿ ಎಂದು ಪ್ರಾಯೋಗಿಕವಾಗಿ ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.

## ಮಕ್ಕಳಿಗೆ ಪೂರಕ ಆಹಾರ

ಹಳ್ಳಿಯಲ್ಲಿರುವ ಪೂರ್ವ ಪ್ರಾಥಮಿಕ ಶಾಲಾ ಮಕ್ಕಳಿಗೆ ದೊರಕಬೇಕಾದ ಪೌಷ್ಟಿಕ ಆಹಾರದಲ್ಲಿ ವಿಟಮಿನ್ ಎ ಹಾಗೂ ಕಬ್ಬಿಣ ಅಂಶ ಇರಲೇಬೇಕು. ಇವು ಸುಲಭವಾಗಿ ಸಿಗುವ ಅಕ್ಕಿಹಿಟ್ಟು ನುಗ್ಗೆಸೊಪ್ಪು ಕ್ಯಾರೆಟ್ ತೆಂಗಿನಕಾಯಿ ಇವುಗಳಿಂದ ಅಕ್ಕಿ ರೊಟ್ಟಿ ಯನ್ನು ತಯಾರಿಸಿ ಮಕ್ಕಳಿಗೆ ಕೊಡಬಹುದು ಅಕ್ಕಿ ರೊಟ್ಟಿ ಯನ್ನು ಆಹಾರ ವಿಜ್ಞಾನ ವಿಭಾಗದ ಪ್ರಾಧ್ಯಾಪಕಿ ಯಾದ ಡಾಕ್ಟರ್ ವೀಣಾ ಬಸಪ್ಪ ಅವರು ರೈತ ಮಹಿಳೆಯರಿಗೆ ತೋರಿಸಿಕೊಟ್ಟರು ಇದನ್ನು ಮಕ್ಕಳಿಗೆ ತಮ್ಮ ತಮ್ಮ ಮನೆಗಳಲ್ಲಿ ತಯಾರಿಸಿ ಕೊಡಬೇಕೆಂದು ಸೂಚಿಸಿದರು



# ಮಳೆನೀರು ಕೊಯ್ಲು



ಚಿಕ್ಕಬಳ್ಳಾಪುರ ಜಿಲ್ಲೆ ಬರಪ್ರದೇಶವಾಗಿದ್ದು, ಮಳೆ ಬೀಳುವ ಪ್ರಮಾಣ ಕಡಿಮೆ, ಬಂದ ಮಳೆಯ ನೀರನ್ನು ಉಪಯುಕ್ತವಾದ ರೀತಿಯಲ್ಲಿ ಬೆಳೆಗೆ ಮತ್ತು ಇತರೆ ಚಟುವಟಿಕೆಗಳಿಗೆ ಮಳೆ ನೀರು ಕೊಯ್ಲು ಮಾಡಿ ಉಪಯೋಗಿಸಬಹುದು ಎಂದು ರೈತರಿಗೆ ಮಾಹಿತಿ ನೀಡಲಾಯಿತು.

# ರೋಸ್‌ಡೇ

ನಮಗೆ ಜೀವನದಲ್ಲಿ ಛಲ ಇದ್ದರೆ ಏನು ಬೇಕಾದರೂ ಗೆದ್ದು ತೋರಿಸಬಹುದು ಎಂಬುವುದಕ್ಕೆ ಮಾದರಿಯಾದವರು ಮಿಲಿಂಡಾ ರೋಸ್. ಅವರಿಗೆ ಕ್ಯಾನ್ಸರ್ ಬಂದಾಗ ಡಾಕ್ಟರ್ ಕೇವಲ ಆರು ತಿಂಗಳು ಬದುಕೋದು ಎಂದು ಹೇಳಿದಾಗ ಅವರು ಛಲ ಬಿಡದೇ ಸತತ ಆರು ತಿಂಗಳು ಬದುಕಿ ತೋರಿಸಿ ನಮಗೆಲ್ಲಾ ಸ್ಫೂರ್ತಿಯಾಗಿದ್ದಾರೆ. ಅವರು ಹುಟ್ಟಿದ ದಿನವನ್ನು ವಿಶ್ವ ರೋಸ್ ದಿನವವನ್ನಾಗಿ ಆಚರಿಸುತ್ತಾರೆ. ಈ ದಿನವನ್ನು ನಾವೆಲ್ಲಾ ಕ್ಯಾನ್ಸರ್ ಪೇಷಂಟ್ಸ್‌ಗಳಿಗೆ ಮೀಸಲಿಟ್ಟು ಅವರ ಜೊತೆ ನಾವೂ ಇದ್ದೇವೆ ಎಂದು ನೋ ಕ್ಯಾನ್ಸರ್ ಬ್ಯಾಡ್ಜ್ ಹಾಕಿಕೊಳ್ಳುವುದರ ಮೂಲಕ ಆಚರಿಸಿದೆವು.

ಈ ಪ್ರದೇಶದ ಇನ್ನೊಂದು ಬೆಳೆಯಾದ ಗುಲಾಬಿಯ ಮೌಲ್ಯವರ್ಧನೆಯನ್ನು ಮಾಡಿ ತೋರಿಸಿದೆವು. ಮೊದಲಿಗೆ ರೋಸ್‌ವಾಟರ್‌ಅನ್ನು ಮಾಡುವ ವಿಧಾನ ತೋರಿಸಿ, ಅದರ ಉಪಯೋಗ ತಿಳಿಸಿಕೊಟ್ಟೆವು. ನಂತರ ಗುಲ್‌ಕನ್ನು ಮಾಡುವ ವಿಧಾನ ತೋರಿಸಿದೆವು. ಗುಲಾಬಿ ಸೌಂಧರ್ಯ ವರ್ಧನೆಯಲ್ಲಿ ಪ್ರಮುಖವಾದದ್ದರಿಂದ ನಾವು ರೋಸ್‌ಜೆಲ್ ಮಾಡುವ ವಿಧಾನ ತೋರಿಸಿ ಉಪಯೋಗಗಳನ್ನು ತಿಳಿಸಿಕೊಟ್ಟೆವು.






## ಶೂನ್ಯಶಕ್ತಿ ಶೀತಲ ಕೋಣೆ



ತಾಜಾ ತರಕಾರಿ ಮತ್ತು ಹಣ್ಣುಗಳ ಮಾರುಕಟ್ಟೆಯಲ್ಲಿ ಹೆಚ್ಚು ಬೇಡಿಕೆಯಾಗಿರುತ್ತದೆ. ಶೂನ್ಯಶಕ್ತಿ ಶೀತಲ ಕೋಣೆಯಲ್ಲಿ ತರಕಾರಿ ಮತ್ತು ಹಣ್ಣುಗಳನ್ನು ಇಡುವುದರಿಂದ ಅವುಗಳ ಜೀವಿತಾವಧಿಯನ್ನು ಹೆಚ್ಚಿಸಬಹುದು, ಶೂನ್ಯ ಶಕ್ತಿ ಶೀತಲ ಕೋಣೆಯು ಜಮೀನಿನಲ್ಲಿ ಹಣ್ಣು ಮತ್ತು ತರಕಾರಿ ಸಂಗ್ರಹಣೆಗೆ ಇರುವ ಪ್ರಾಯೋಗಿಕ ಹಾಗೂ ಕಡಿಮೆ ವೆಚ್ಚದ ಪರ್ಯಾಯವಾಗಿದೆ. ಇದು ತಂಪಾಗಿಸಲು ಆವಿಯಾಗುವಿಕೆಯ ಕೂಲಿಂಗ್ ತತ್ವದ ಮೇಲೆ ಕೆಲಸ ಮಾಡುತ್ತದೆ. ಇದನ್ನು ರಚಿಸಲು ಎರಡು ಇಟ್ಟಿಗೆ ಗೋಡೆಗಳನ್ನು 7.5 ಸೆಂಟಿಮೀಟರ್ ಅಂತರ ಬಿಟ್ಟು ಆ ಜಾಗದಲ್ಲಿ ಮರಳನ್ನು ತುಂಬಲಾಗುತ್ತದೆ. ನಂತರ ಆ ಮರಳಿಗೆ ನೀರು ಚುಮುಕಿಸಿ ತೇವಾಂಶವನ್ನು ಕಾಪಾಡಿಕೊಳ್ಳುವಂತೆ ಮಾಡಲಾಗುತ್ತದೆ. ಈ ಕೋಣೆಗಳು ಅಲ್ಪಾವಧಿ ಶೇಖರಣೆಗೆ ಸೂಕ್ತ ಮತ್ತು ಸಣ್ಣ ರೈತರಿಗೆ ತಮ್ಮ ಉತ್ಪನ್ನಗಳನ್ನು ಸಂಗ್ರಹಿಸಲು ಸಹಾಯಕವಾಗಿದೆ. ಇದರ ಒಂದು ಸಣ್ಣ ಮಾದರಿಯನ್ನು ಕೃಷಿ ಬೆಳೆ ಸಂಗ್ರಹಾಲಯದಲ್ಲಿಯೂ ಕೂಡ ನಿರ್ಮಿಸಿ ರೈತರಿಗೆ ನೈಜವಾಗಿ ಪ್ರದರ್ಶಿಸಲಾಗಿದೆ.

## ಅಣಬೆ ಬೇಸಾಯ

ಅಣಬೆ ಬೇಸಾಯದ ಬಗ್ಗೆ ಅರಿವನ್ನು ಮೂಡಿಸುವ ಸಲುವಾಗಿ ವಿದ್ಯಾರ್ಥಿಗಳಾದ ನಾವು ಅಣಬೆ ಬೇಸಾಯ ಹಾಗೂ ಅಣಬೆಯ ಉಪಯೋಗಗಳ ಬಗ್ಗೆ ಪದ್ಧತಿ ಪ್ರಾತ್ಯಕ್ಷಿಕೆ ಮೂಲಕ ನಮ್ಮೂರಿನ ರೈತ ಹಾಗೂ ರೈತ ಮಹಿಳೆಯರಿಗೆ ಅಣಬೆ ಬೆಳೆಯುವ ವಿಧಾನ ಹಾಗೂ ಅಣಬೆಯ ಉಪಯೋಗಗಳಾದ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಕ್ಯಾನ್ಸರ್ ವಿರುದ್ಧ ಹೋರಾಡುತ್ತದೆ. ಎಂದು ರೈತರಿಗೆ ಮಾಹಿತಿ ನೀಡಿದೆವು.





# ಹೈನುಗಾರಿಕೆ; ಆದಾಯದಲ್ಲಿ ಚೇತರಿಕೆ






ಈ ಕಾರ್ಯಕ್ರಮದಲ್ಲಿ ಪಶುಸಂಗೋಪನಾ ವಿಭಾಗದ ಸಹಪ್ರಾಧ್ಯಾಪಕರಾದ ಡಾ. ಆನಂದ್ ಮಣೆಗಾರ್ ಭಾಗವಹಿಸಿದ್ದು, ಹೈನುಗಾರಿಕೆಯ ಮಹತ್ವ, ತಳಿಗಳು, ವ್ಯಾಕ್ಸಿನೇಷನ್, ಮೇವು ಬೆಳೆಗಳ ಮಹತ್ವ, ಆಹಾರ ಪದ್ಧತಿ ಕ್ರಮಗಳು, ಕರು ಸಾಕಾಣಿಕೆ, ಖರ್ಚು–ವೆಚ್ಚ, ಹಾಲು ಉತ್ಪಾದನೆ ಹೆಚ್ಚಿಸುವ ಬಗೆ, ಹಾಲಿನಲ್ಲಿರುವ ಕೊಬ್ಬಿನ ಗುಣಮಟ್ಟತೆ, ಸ್ವಚ್ಛತೆ, ಹಾಲಿನ ಇಳುವರಿ ಕಡಿಮೆಯಾಗಲು ಕಾರಣಗಳು, ಹಾಗೂ ಹಾಲಿನ ಉತ್ಪಾದನೆ ಹೆಚ್ಚಿಸುವ ಬಗೆ, ಕುರಿ ಸಾಕಾಣಿಕೆ, ಮೇಕೆ ಸಾಕಾಣಿಕೆ, ಕೋಳಿ ಸಾಕಾಣಿಕೆ ಹಾಗೂ ಸಮಗ್ರ ಕೃಷಿ ನಿರ್ವಹಣೆಯ ಬಗ್ಗೆ ಸಂಪೂರ್ಣ ಮಾಹಿತಿ ನೀಡಿದರು. ರೈತರೊಂದಿಗೆ ಗುಂಪು ಚರ್ಚೆ ಮಾಡಿ ಹೈನುಗಾರಿಕೆಯ ಬಗ್ಗೆ ರೈತರಿಗಿದ್ದ ಸಮಸ್ಯೆಗಳಿಗೆ ಪರಿಹಾರ ನೀಡಿದರು. ವಿದ್ಯಾರ್ಥಿಗಳು ಮಾತನಾಡಿ ಹೈನುಗಾರಿಕೆಯ ಮಹತ್ವ, ಇತಿಹಾಸ, ಮೇವು ಬೆಳೆಗಳ ತಳಿ ಮಹತ್ವದ ಬಗ್ಗೆ ಮಾಹಿತಿ ನೀಡಿದರು.











# ದ್ರಾಕ್ಷಿ ರೋಗ ನಿರ್ವಹಣೆ

ದ್ರಾಕ್ಷಿಯು ಈ ಊರಿನ ಮುಖ್ಯ ತೋಟಗಾರಿಕಾ ಬೆಳೆಯಾಗಿದ್ದು ಒಮ್ಮೆ ದ್ರಾಕ್ಷಿ ಬೆಳೆಗಾರರನ್ನೆಲ್ಲಾ ಒಟ್ಟುಗೂಡಿಸಿ ಬೋರ್ಡೆಕ್ಸ್ ಮಿಶ್ರಣ ತಯಾರಿಕೆಯನ್ನು ಪ್ರಾಯೋಗಿಕವಾಗಿ ವಿದ್ಯಾರ್ಥಿಗಳು ತೋರಿಸಿಕೊಟ್ಟರು. ನಂತರ ರೋಗಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ಎ. ನಾಗರಾಜುರವರು ದ್ರಾಕ್ಷಿ ರೋಗದ ಗುಣಲಕ್ಷಣಗಳು ಹಾಗೂ ನಿರ್ವಹಣೆಯ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದರ ಜೊತೆಗೆ ರೈತರಿಗೆ ದ್ರಾಕ್ಷಿಯ ರೋಗನಿರ್ವಹಣೆಯ ಬಗ್ಗೆ ಇದ್ದ ಗೊಂದಲ ಬಗೆಹರಿಸಿದರು.
ಸುಣ್ಣ ಮತ್ತು ಮೈಲುತುತ್ತ1:1 ಪ್ರಮಾಣದಲ್ಲಿ ಬೋರ್ಡೆಕ್ಸ್ ಮಿಶ್ರಣ ತಯಾರಿಸುವ ಸುಲಭವಾದ ವಿಧಾನ ತಿಳಿಸಿಕೊಟ್ಟರು.




# ನ್ಯಾನೋ ಯೂರಿಯಾ

ಇಫ್ಕೊ (ಇಂಡಿಯನ್ ಫಾರ್ಮರ್ಸ್ ಫರ್ಟಿಲೈಝರ್ಸ್ ಕೊ ಆಪರೇಟಿವ್ ಲಿಮಿಟೆಡ್) ಸಂಸ್ಥೆಯಿಂದ ನೂತನವಾಗಿ ಬಿಡುಗಡೆಯಾಗಿರುವ ದ್ರವರೂಪದಲ್ಲಿ ಲಭ್ಯವಿರುವ ನ್ಯಾನೋ ಯೂರಿಯಾವನ್ನು ರೈತರಿಗೆ ವಿದ್ಯಾರ್ಥಿಗಳು ಪರಿಚಯಿಸುವ ಸಲುವಾಗಿ ಸಂಧ್ಯಾ ಸಂವಾದವನ್ನು ಏರ್ಪಡಿಸಲಾಗಿತ್ತು. ಇದರ ಪರಿಣಾಮವನ್ನು ರೈತರಿಗೆ ನೇರವಾಗಿ ತಿಳಿಸಿಕೊಡುವ ಸಲುವಾಗಿ ಆಯ್ದ ತಾಕುಗಳಲ್ಲಿ ನೀಡಿದ್ದ ಮಾದರಿಯನ್ನು ಬಳಸಿ ವಿವಿಧ ಬೆಳೆಗಳಿಗೆ ಸಿಂಪಡಿಸಲಾಯಿತು.




ನ್ಯಾನೋ ಯೂರಿಯಾವನ್ನು ಎಲ್ಲಾ ಬೆಳೆಗಳಿಗೂ ಉಪಯೋಗಿಸಬಹುದಾಗಿದ್ದು ಬೆಳೆಯ ಯಾವ ಹಂತದಲ್ಲಿ ಸಿಂಪಡಿಸಬೇಕು ಮತ್ತು ಕೈಗೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮಗಳು ಹಾಗೂ ಅದರ ಪರಿಪೂರ್ಣ ಉಪಯೋಗಗಳ ಕುರಿತು ರೈತರಿಗೆ ವಿವರಿಸಲಾಯಿತು.

## ಉತ್ತಮ ಬೀಜ ಉಪಯೋಗ

ರೈತರಿಗೆ ಉತ್ತಮ ಬೀಜದ ಬಳಕೆಯಿಂದ ಆಗುವ ಉಪಯೋಗಗಳನ್ನು ತಿಳಿಸಿಕೊಡುವ ಸಲುವಾಗಿ ಸಂಜೆ ಸಭೆ ನಡೆಸಲಾಯಿತು. ಉತ್ತಮ ಬೀಜದ ಗುಣಲಕ್ಷಣಗಳು, ಪ್ರಯೋಜನಗಳು, ಹಾಗೂ ರೈತರು ಬೀಜ ಖರೀದಿಸುವಾಗ ಅನುಸರಿಸಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ಮಾಹಿತಿ ನೀಡಲಾಯಿತು.




## ಅಜೋಲ್ಲಾ

ಹೈನುಗಾರಿಕೆಯಲ್ಲಿ ಮುಂಚೂಣಿಯಲ್ಲಿರುವ ಅಪ್ಪೇಗೌಡನಹಳ್ಳಿಯಲ್ಲಿ ಪಶುಗಳಿಗೆ ಒದಗಿಸುವ ಪೂರಕ ಆಹಾರದ ಮಾಹಿತಿ ನೀಡುವ ಪರಿಯಿಂದ ಅಜೋಲ್ಲಾ ಪಿಟ್ ಮಾಡುವ ವಿಧಾನವನ್ನು ತೋರಿಸಿಕೊಡುವುದರ ಜೊತೆಯಲ್ಲಿ ಅಜೋಲ್ಲಾ ಬಳಸುವ ವಿಧಾನ ಮತ್ತು ಅದರಿಂದಾಗುವ ಉಪಯೋಗಗಳ ಬಗ್ಗೆ ಮಾಹಿತಿ ನೀಡಲಾಯಿತು.



## ಜೇನು ಸಾಕಾಣಿಕೆ

ಜೇನು ಕೃಷಿ ಸಮಗ್ರ ಕೃಷಿ ಪದ್ಧತಿಯ ಭಾಗವಾಗಿದೆ. ಬೆಳೆಗಳ ಇಳುವರಿ ಹೆಚ್ಚಲು ಅನೇಕ ರೈತರು ತೋಟಗಳಲ್ಲಿ ಪೆಟ್ಟಿಗೆಗಳನ್ನು ಇಟ್ಟು ಜೇನು ಸಾಕಾಣಿಕೆ ಮಾಡುತ್ತಿದ್ದಾರೆ ಎಂದು ನಮ್ಮ ವಿಶ್ವವಿದ್ಯಾಲಯದ ಸಹಪ್ರಾಧ್ಯಾಪಕಿಯಾದ ಡಾ. ಬಿ.ವಿ. ಶ್ವೇತಾರವರು ವಿದ್ಯಾರ್ಥಿಗಳಿಗೂ ಹಾಗೂ ರೈತರಿಗೂ ತಿಳಿಸಿಕೊಟ್ಟರು. ಹುತ್ತದಿಂದ ಪೆಟ್ಟಿಗೆಗೆ ಜೇನು ಹುಳವನ್ನು ಹಾಗೂ ಗೂಡನ್ನು ವರ್ಗಾಯಿಸುವ ಪದ್ಧತಿ ಹಾಗೂ ತದನಂತರದ ಕ್ರಮಗಳನ್ನು ರೈತರಿಗೆ ತಿಳಿಸಿಕೊಡಲಾಯಿತು.








## ಅಂತರಜಲ ಮರುಪೂರಣ

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸಾಮಾನ್ಯವಾಗಿ ರೈತರು ನೀರಾವರಿ ಆಧಾರಿತ ಬೆಳೆಗಳನ್ನು ಬೆಳೆಯುತ್ತಿದ್ದು ನೀರಿನ ಮೂಲವು ಸಾಮಾನ್ಯವಾಗಿ ಕೊಳವೆ ಬಾವಿಯೇ ಆಗಿರುತ್ತದೆ. ಅಪ್ಪೇಗೌಡನಹಳ್ಳಿಯಲ್ಲೂ ಕೂಡ ಇದೇ ಪರಿಸ್ಥಿತಿಯಿದ್ದು, ಹಲವು ಕೊಳವೆ ಬಾವಿಗಳು ಖಾಲಿಯಾಗಿರುವುದು ರೈತರಿಗೆ ನೋವಿನ ವಿಷಯವಾಗಿದೆ. ಇದನ್ನು ಗಮನಿಸಿದ ವಿದ್ಯಾರ್ಥಿಗಳು ಕೊಳವೆ ಬಾವಿಯ ಮರುಪೂರಣೆ ಬಗ್ಗೆ ಮಾಹಿತಿ ನೀಡುವುದು ಅತ್ಯಗತ್ಯವೆಂದು ಇದರ ಬಗ್ಗೆ ಒಂದು ಸಂಜೆಯ ಸಭೆಯನ್ನು ಏರ್ಪಡಿಸಿದರು. ಈ ಸಭೆಯಲ್ಲಿ ರೈತರಿಗೆ ಕೊಳವೆ ಬಾವಿ ಮರುಪೂರಣೆ, ಅದರ ಮಹತ್ವ, ಮತ್ತು ಮಾಡುವ ವಿಧಾನದ ಬಗ್ಗೆ ತಿಳಿಸಿಕೊಡಲಾಯಿತು. ಕೊಳವೆ ಬಾವಿ ಮರುಪೂರಣೆಯನ್ನು ಮಳೆ ನೀರು ಕೊಯ್ಲಿನೊಂದಿಗೂ ಜೋಡಣೆ ಮಾಡಬಹುದು. ಕೊಳವೆ ಬಾವಿ ಮರುಪೂರಣ ಮಾಡುವುದರಿಂದ ಬತ್ತಿರುವ ಕೊಳವೆ ಬಾವಿಗಳಿಗೆ ಮರುಜೀವ ನೀಡಬಹುದೆಂದು ತಿಳಿಸಲಾಯಿತು.



# ಬೆಳೆ ಸುರಕ್ಷಾ ಕವಚ : ಬೆಳೆ ವಿಮೆ

ಬರ, ಪ್ರವಾಹ, ಭೂ–ಕುಸಿತ, ಚಂಡಮಾರುತ, ಕ್ರಿಮಿಕೀಟ ಬಾಧೆ ಮತ್ತು ರೋಗಗಳು ಹಾಗೂ ಇನ್ನೂ ಅನೇಕ ವ್ಯಾಪಕ ಶ್ರೇಣಿಯ ಬಾಹ್ಯ ಅಪಾಯಗಳಿಂದ ಏರ್ಪಡುವ ಬೆಳೆ ಇಳುವರಿ ನಷ್ಟದ ವಿರುದ್ಧ ರೈತರಿಗೆ ವಿಮೆ ಮಾಡಿಸುವ ಕುರಿತು ಮಾಹಿತಿ ನೀಡಲಾಯಿತು. ಹಾಗೆಯೇ ಅಪ್ಪೇಗೌಡನಹಳ್ಳಿಯಲ್ಲಿ ವಿಮೆ ಮಾಡಬಹುದಾದ ಬೆಳೆಗಳು, ವಿಮೆ ಪ್ರಕ್ರಿಯೆ, ಬೇಕಾಗಿರುವ ದಾಖಲಾತಿಗಳು, ವಿಮೆ ಕ್ಲೇಮ್ ಮಾಡುವುದರ ಬಗ್ಗೆ ತಿಳಿಸಿದೆವು. ಬಹುಮುಖ್ಯವಾಗಿ ಬೆಳೆವಿಮೆಯ ಬಗ್ಗೆ ರೈತರಲ್ಲಿದ್ದ ತಪ್ಪು ತಿಳುವಳಿಕೆಗಳು ಹಾಗೂ ಬೆಳೆವಿಮೆ ಅರ್ಜಿ ಹಾಗೂ ಇತರ ದಾಖಲಾತಿಗಳನ್ನು ಒದಗಿಸುವ ಸಂದರ್ಭದಲ್ಲಿ ಆಗುವಂತಹ ತಪ್ಪುಗಳ ಬಗ್ಗೆ ಅರಿವು ಮೂಡಿಸಿದೆವು.







# ವಿಶ್ವ ಆಹಾರ ದಿನ

ವಿಶ್ವ ಆಹಾರ ದಿನ ಅಪ್ಪೇಗೌಡನಹಳ್ಳಿ ಯಲ್ಲಿ ಆಹಾರ ಮತ್ತು ಆರೋಗ್ಯದ ಬಗ್ಗೆ ಅರಿವು ಮೂಡಿಸುವ ಸಲುವಾಗಿ ವಿಶ್ವ ಆಹಾರ ದಿನ ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಮತ್ತು ಮಹಿಳೆಯರಿಗೆ ಪೂರಕ ಆಹಾರ ತಯಾರಿಸುವುದು ನೀಡುವುದು ಸ್ವಚ್ಛತೆ ಕಾಪಾಡಿಕೊಳ್ಳುವುದರ ಬಗ್ಗೆ ಮಾಹಿತಿ ನೀಡಲಾಯಿತು. ಅದರ ಜೊತೆಗೆ ತಾಂತ್ರಿಕ ಅಧಿಕಾರಿಗಳಾದ ಡಾಕ್ಟರ್ ಮಂಜುನಾಥ್ ಗೌಡ ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು ಇವರು ರೇಷ್ಮೆ ಕೃಷಿಯ ಕುರಿತು ಮಾಹಿತಿ ನೀಡಿದರು. ಮತ್ತು ರೈತರಿಗೆ ರೇಷ್ಮೆ ಕೃಷಿಯಲ್ಲಿ ಕಂಡುಬರುವ ರೋಗಗಳಿಗೆ ಪರಿಹಾರ ಸೂಚಿಸಿದ್ದರಿಂದ ಕಾರ್ಯಕ್ರಮ ಅರ್ಥಪೂರ್ಣವಾಗಿ ಕೊನೆಗೊಂಡಿತು.





# ಪಶು ಆರೋಗ್ಯ ಚಿಕಿತ್ಸಾ ಶಿಬಿರ




ಹೈನುಗಾರಿಕೆ ಪ್ರಮುಖ ಉದ್ಯಮವಾದ ಹಳ್ಳಿಯಲ್ಲಿ ಹಸುಗಳ ಆರೋಗ್ಯ ಹಾಗೂ ರೋಗ ನಿರ್ವಹಣೆಯ ಸಲುವಾಗಿ ಈ ಕಾರ್ಯಕ್ರಮವನ್ನು ಆಯೋಜಿಸಿದ್ದೆವು. ರೋಗವನ್ನು ತಡೆಗಟ್ಟಲು ಸರಳ ಮತ್ತು ಉಪಯುಕ್ತ ವಿಧಾನವೆಂದರೆ ಲಸಿಕೆ ಹಾಕಿಸುವುದು. ವರ್ಷಕ್ಕೊಂದು ಬಾರಿ ಈ ಲಸಿಕೆಯನ್ನು ಕೊಡಿಸಬೇಕು. ಮಳೆಗಾಲ ಪ್ರಾರಂಭವಾಗುವ ಮೊದಲು ಕಡ್ಡಾಯವಾಗಿ ಲಸಿಕೆ ಕೊಡಿಸಬೇಕು. ಎಮ್ಮೆ ಮತ್ತು ದನಕರುಗಳಲ್ಲಿ ಹಾಗೂ ಕುರಿ ಮತ್ತು ಮೇಕೆಗಳಲ್ಲಿ ಮೂರು ತಿಂಗಳ ವಯಸ್ಸಿನ ನಂತರ ಲಸಿಕೆಯನ್ನು ಹಾಕಿಸಬೇಕು. ಈ ಲಸಿಕೆಯು ಇಲಾಖೆಯ ಪಶುವೈದ್ಯ ಸಂಸ್ಥೆಗಳಲ್ಲಿ ಲಭ್ಯವಿರುತ್ತದೆ. ಸುಮಾರು ಒಂದು ನೂರು ಹಸುಗಳನ್ನು ತಪಾಸಣೆ ಮಾಡಲಾಯಿತು. ಉಚಿತ ಚಿಕಿತ್ಸೆ ಮತ್ತು ಔಷಧಿಗಳನ್ನು ವಿತರಿಸಲಾಯಿತು. ಈ ಶಿಬಿರದಲ್ಲಿ ಚಟುವಟಿಕೆಯ ಉಸ್ತುವಾರಿ ಶಿಕ್ಷಕರಾದ ಡಾ. ವೈ.ಎನ್. ಶಿವಲಿಂಗಯ್ಯರವರ ನೇತೃತ್ವದಲ್ಲಿ ಪಶುವೈದ್ಯಾಧಿಕಾರಿ ಡಾ.ಬಿ.ಕೆ. ರಮೇಶ್, ವಿಜ್ಞಾನಿ ಪಿ.ಎಚ್. ರಾಮಾಂಜನಿಗೌಡ, ಟಿ.ಎಂ. ಅರವಿಂದ, ದಯಾನಂದ, ಡಾ. ತಿಮ್ಮರಾಜು, ಡಾ. ಶ್ರೀನಿವಾಸ, ಡಾ. ಕೃಷ್ಣಮೂರ್ತಿ, ಡಾ. ಸುಚಿತ್ರ, ಡಾ. ಪೂಜಾರ ಸೂರಪ್ಪ, ಡಾ. ಆನಂದ್ ಮಾನೇಗರ್, ಡಾ. ಗಣೇಶಮೂರ್ತಿ ಹಾಜರಿದ್ದರು.







# ಬೇಕರಿ ತಿನಿಸುಗಳ ತಯಾರಿಕೆ

ಕೇಕು, ಡೋನೆಟ್, ಕೊಬ್ಬರಿ ಬಿಸ್ಕಟ್ಟು ಮಾಡುವುದು ಹೇಗೆ ಎಂದು ಬೇಕರಿ ಯೂನಿಟ್ಟಿನವರು ತೋರಿಸಿಕೊಟ್ಟರು. ಮಹಿಳೆಯರಿಗೆ ವಿಶೇಷವಾಗಿ ಬೇಕರಿ ಉತ್ಪನ್ನಗಳನ್ನು ತಯಾರಿ ಮಾಡುವ ವಿಧಾನವನ್ನು ತಿಳಿಸಿಕೊಡುವ ಸಲುವಾಗಿ ಹೆಬ್ಬಾಳದಿಂದ ಬಂದ ಬೇಕರಿ ತರಬೇತಿ ಘಟಕದ ಮಮತಾ ಹಾಗೂ ಸೆಲ್ವಿ ರವರು ಕೇಕು, ಡೋನೆಟ್, ಕೊಬ್ಬರಿ ಬೆಸ್ಕೆಟ್ಟು ಮನೆಯಲ್ಲಿಯೇ ಸುಲಭವಾಗಿ ಮಾಡುವ ವಿಧಾನವನ್ನು ತಿಳಿಸಿಕೊಟ್ಟರು. ಇದನ್ನು ನೋಡಿದ ರೈತ ಮಹಿಳೆಯರು ‘ಇಷ್ಟು ಸುಲಭಾನಾ ಕೇಕ್ ಮಾಡುವುದು ಎಂದು ಆಶ್ಚರ್ಯಚಕಿತರಾದರು.













# ಎರೆಹುಳು ಗೊಬ್ಬರ ಬಳಸಿ

ಅಪ್ಪೇಗೌಡನಹಳ್ಳಿಯಲ್ಲಿ ರೈತರು ಕೇವಲ ಕೊಟ್ಟಿಗೆ ಗೊಬ್ಬರವನ್ನು ಬಳಸುತ್ತಿದ್ದರು ಮತ್ತು ಅವರಿಗೆ ಎರೆಹುಳು ಗೊಬ್ಬರದ ಬಗ್ಗೆ ಕಡಿಮೆ ಮಾಹಿತಿ ಇದ್ದು, ಇದನ್ನು ಅರಿತ ಕೃಷಿ ವಿದ್ಯಾರ್ಥಿಗಳು, ಎರೆಹುಳು ಗೊಬ್ಬರದ ಬಗ್ಗೆ ಅರಿವು ಮೂಡಿಸಲು ಒಂದು ಸಂಜೆ ಸಭೆಯನ್ನು ಏರ್ಪಡಿಸಿದ್ದರು. ಈ ಸಭೆಯಲ್ಲಿ ಎರೆಹುಳು ಗೊಬ್ಬರದ ಮಹತ್ವದ ಬಗ್ಗೆ ವಿವರಿಸುತ್ತಾ ಎರೆಹುಳು ಗೊಬ್ಬರವನ್ನು ಸುಲಭವಾಗಿ ತಯಾರಿಸುವ ವಿಧಾನವನ್ನು ತಿಳಿಸಿಕೊಟ್ಟರು. ಅದಲ್ಲದೇ ಗೊಬ್ಬರದ ತೊಟ್ಟಿ ಕಟ್ಟಲು ಕೃಷಿ ಇಲಾಖೆಯಿಂದ ದೊರೆಯುವ ಅನುದಾನದ ಬಗ್ಗೆಯೂ ರೈತರಿಗೆ ಮಾಹಿತಿ ನೀಡಿದರು.

ಎರೆಹುಳು ಗೊಬ್ಬರವನ್ನು ತಯಾರಿಸಲು ಬೇಕಾಗುವ ಸಾಮಾಗ್ರಿಗಳ ಲಭ್ಯತೆಯ ಬಗ್ಗೆ ತಿಳಿಸಿಕೊಟ್ಟರು, ಇದರಿಂದ ಪ್ರೇರಣೆಗೊಂಡ ಕೆಲವು ರೈತರು ಎರೆಹುಳು ಗೊಬ್ಬರದ ತೊಟ್ಟಿ ನಿರ್ಮಾಣ ಮಾಡಿಸಲು ಆಸಕ್ತಿ ತೋರಿಸಿ, ಸಹಾಯಧನ ಪಡೆಯಲು ಬೇಕಾಗುವ ದಾಖಲೆಗಳನ್ನು ಕೃಷಿ ಇಲಾಖೆಗೆ ಸಲ್ಲಿಸಿ ವಿದ್ಯಾರ್ಥಿಗಳ ಶ್ರಮಕ್ಕೆ ಅರ್ಥವನ್ನು ನೀಡಿದರು.

ಕೇವಲ ಸಂಜೆಯ ಸಭೆಯಲ್ಲಿ ಅಷ್ಟೇ ಅಲ್ಲದೆ ವಿದ್ಯಾರ್ಥಿಗಳು ಬೆಳೆ ಸಂಗ್ರಹಾಲಯದಲ್ಲಿಯೂ ಎರೆಹುಳು ಗೊಬ್ಬರ ತೊಟ್ಟಿಯನ್ನು ನಿರ್ಮಿಸಿ ಎರೆಹುಳು ಗೊಬ್ಬರ ತಯಾರಿಸುವುದನ್ನು ನಿಜವಾಗಿ ಪ್ರದರ್ಶನಕ್ಕಿಟ್ಟಿದ್ದಾರೆ.



# ಸ್ವಾತಂತ್ರ್ಯ ದಿನಾಚರಣೆ





ಮರಳಿದೆವು ನಾವು ಮತ್ತೆ ಶಾಲೆಗೆ
ಆಚರಿಸಲು ಆ ಅಮೋಘ ಗಳಿಗೆ

'ರಾವೆ' ಆಗಿತ್ತು ನಮ್ಮೆಲ್ಲರ ಕನಸಿನ ಪಯಣ
ಸ್ವತಂತ್ರ ದಿನವನ್ನು ವಿಭಿನ್ನವಾಗಿ ಆಚರಿಸೋಣ

ಬಳಸಿ ಎಲ್ಲಾ ಕಲಾಕೃತಿಯನ್ನ
ಬಿಡಿಸಿದೆವು ಭಾರತ ಭೂಪಟವನ್ನ

ಕೊಡಬೇಕೆಂದು ಎಲ್ಲದಕ್ಕೂ ಕೃಷಿಯ ಮೆರುಗನ್ನ
ಕೇಸರಿ ಬಿಳಿ ಹಸಿರು ಬಿಂಬಿಸಲು ಇಟ್ಟೆವು
ಗಜ್ಜರಿ, ಮೂಲಂಗಿ, ಬೆಂಡೇಕಾಯಿಯನ್ನ

ನಿಂತನು ನೇಗಿಲು ಹೊತ್ತ ರೈತ ಭೂಪಟದ ಪಕ್ಕದಲ್ಲಿ
ನಮ್ಮದೆಂದು ಮೂಡಿತು ಜಿಕೆವಿಕೆಯ ಲೋಗೋ ಅಲ್ಲಿ

ಅಂದಿನ ನಮ್ಮ ಸಂಭ್ರಮಕೆ ಎಣೆಯೆಲ್ಲಿ?
ರಾರಾಜಿಸಿತು ಭಾರತದ ಬಾವುಟ ಬಾನಿನಲ್ಲಿ



## ವರಮಹಾಲಕ್ಷ್ಮಿ ಹಬ್ಬ




ಸಾಮಾನ್ಯರಲ್ಲಿ ಅಸಾಮಾನ್ಯ ಆಗಬೇಕು ಎಂದು ಅಂದುಕೊಂಡಾಗ ನಮಗೆ ಮೊದಲು ಸಿಕ್ಕಿದ್ದು ವರಮಹಾಲಕ್ಷ್ಮಿ ಹಬ್ಬ. ಆ ಯೋಚನೆ ಮೊದಲು ನಮಗೆ ಬಂದಾಗ ಆಡಂಬರದ ವರಮಹಾಲಕ್ಷ್ಮಿ ಬದಲು ಧಾನ್ಯಲಕ್ಷ್ಮಿ ಮಾಡೋಣ ಎಂದು ಅಂದುಕೊಂಡೆವು. ತೆಂಗಿನಕಾಯಿಯಲ್ಲಿ ಸಿರಿಧಾನ್ಯಗಳನ್ನು ಬಳಸಿ ಕಣ್ಣು, ಕಿವಿ, ಮೂಗು, ಓಲೆ, ಕಿರೀಟವನ್ನು ಅಂಟಿಸಿ ಲಕ್ಷ್ಮಿ ಮುಖವನ್ನು ಮಾಡಿದೆವು. ಬಂಗಾರದ ಆಭರಣಗಳ ಬದಲು, ಸಿರಿಧಾನ್ಯಗಳಲ್ಲಿ ಮಾಡಿದ ಆಭರಣವನ್ನೇ ಹಾಕಿ ಧಾನ್ಯಲಕ್ಷ್ಮಿಗೆ ಅಲಂಕಾರ ಮಾಡಿದೆವು. ನವಧಾನ್ಯಗಳನ್ನು ಪೂಜೆಗಿಟ್ಟು ನವ ದೇವತೆಗಳಿಗೆ ಒಪ್ಪಿಸಿ ಪೂಜೆ ಸಲ್ಲಿಸುವುದರ ಮೂಲಕ ಕೃಷಿ ವಿದ್ಯಾರ್ಥಿಗಳಾದ ನಾವು ಸಿರಿಧಾನ್ಯಗಳ ಮಹತ್ವವನ್ನು ಇಲ್ಲಿನ ಗ್ರಾಮಸ್ಥರಿಗೆ ತಿಳಿಸಿದೆವು.

## ವೀರಗಲ್ಲು ಶಾಸನ

ಪದವಿಯ ನಂತರ ಈಗಿನ ಕೃಷಿ ವಿದ್ಯಾರ್ಥಿಗಳು ಕೃಷಿ ಅಧಿಕಾರಿಗಳಾಗಿ ಹಳ್ಳಿಗಳ ಕಡೆ ಹೊರಟಾಗ ಆಕಸ್ಮಿಕವಾಗಿ ಅವರಿಗೆ ಕಾಣಸಿಗಬಹುದಾದ ವೀರಗಲ್ಲು, ಶಾಸನಗಳ ಬಗ್ಗೆ ಪ್ರಾಥಮಿಕ ಮಾಹಿತಿ ತಿಳಿದಿರುವುದು ಅತ್ಯಗತ್ಯ ಎಂದು ಇತಿಹಾಸ ಅಕಾಡೆಮಿಯ ಸದಸ್ಯ, ಶಾಸನತಜ್ಞ ಕೆ.ಧನಪಾಲ್ ತಿಳಿಸಿದರು. ತಾಲೂಕಿನ ಅಪ್ಪೇಗೌಡನಹಳ್ಳಿ ಗ್ರಾಮದಲ್ಲಿ ಜಿಕೆವಿಕೆ ಕೃಷಿ ವಿದ್ಯಾರ್ಥಿಗಳ ಕೃಷಿ ಕಾರ್ಯಾನುಭವ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ ಶಾಸನ ಮತ್ತು ವೀರಗಲ್ಲುಗಳ ಪ್ರಾಥಮಿಕ ಪರಿಚಯ ಶಿಬಿರದಲ್ಲಿ ಮಾತನಾಡಿ, ಕರ್ನಾಟಕ ಇತಿಹಾಸ ಅಕಾಡೆಮಿಯ ಸದಸ್ಯರಿಂದ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವನ್ನು ರಾಜ್ಯದಾದ್ಯಂತ ಹಮ್ಮಿಕೊಂಡು ಶಾಸನ, ವೀರಗಲ್ಲು, ಸ್ಮಾರಕಗಳನ್ನು ಸಂರಕ್ಷಿಸುವ ಕಾರ್ಯವನ್ನು ನಡೆಸುತ್ತಾ ಬಂದಿದೆ. ಸ್ಥಳೀಯಶಾಸನ ಮತ್ತು ವೀರಗಲ್ಲುಗಳ ಇತಿಹಾಸ ಮತ್ತು ಪ್ರಾಮುಖ್ಯತೆಯನ್ನು ತಿಳಿಸಿಕೊಟ್ಟು, ಅವುಗಳನ್ನು ಉಳಿಸುವುದು ಅತ್ಯಗತ್ಯವಾಗಿದೆ ಎಂದರು. ಪದವಿ ನ0ತರ ವಿದ್ಯಾರ್ಥಿಗಳಿಗೆ ತಮ್ಮ ಕಾರ್ಯಕ್ಷೇತ್ರವಾದ ಹಳ್ಳಿಗಳಲ್ಲಿ ಕಂಡುಬರುವ ಶಾಸನ, ವೀರಗಲ್ಲುಗಳು ಮತ್ತು ಸ್ಮಾರಕಗಳನ್ನು ಗುರುತಿಸಲು ಮತ್ತು ಸಂರಕ್ಷಿಸಲು ಸಹಕಾರಿ ಆಗುವಂತೆ ಇತಿಹಾಸದ ಪ್ರಾಥಮಿಕ ಪರಿಚಯವನ್ನು ಈ ಸಂದರ್ಭದಲ್ಲಿ ಧನಪಾಲ್‌ರವರು ವಿವರಿಸಿದರು. ಗ್ರಾಮದ ಸರ್ಕಾರಿ ಶಾಲೆಯಲ್ಲಿ ಪಠ್ಯಾಂಶವನ್ನು ವಿವರಿಸಿದ ನಂತರ ಸುತ್ತಮುತ್ತಲ ಹೊಲಗದ್ದೆಗಳಲ್ಲಿದ್ದ ಕೆಲವು ಅಮೂಲ್ಯ ಶಾಸನ, ವೀರಗಲ್ಲುಗಳನ್ನು ವಿದ್ಯಾರ್ಥಿಗಳಿಗೆ ಪ್ರತ್ಯಕ್ಷವಾಗಿ ಪರಿಚಯ ಮಾಡಿಕೊಡಲಾಯಿತು.

ಶಿಡ್ಲಘಟ್ಟ ತಾಲೂಕಿನ ಇ.ಸಿ: ಗಂಗನಹಳ್ಳಿ ಗಡಿಯ ಒಂದು ಹಾಗೂ ಕಂಬದಹಳ್ಳಿ ಗಡಿಯ ಮತ್ತೊಂದು ವೀರಮಾಸ್ತಿ ಕಲ್ಲುಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಲಾಯ್ತು. ಎರಡೂ ವೀರಗಲ್ಲುಗಳು ಕನಿಷ್ಟ ಸಾವಿರ ವರ್ಷ ಪುರಾತನವಾದವೆಂಬ ವಿಷಯ ತಿಳಿಯುತ್ತಿದ್ದಂತೆ ವಿದ್ಯಾರ್ಥಿಗಳ ಉತ್ಸಾಹ ಇಮ್ಮಡಿಸಿತು. ಕಸಾಪ ತಾ. ಅಧ್ಯಕ್ಷ ಎ.ಎಂ.ತ್ಯಾಗರಾಜ್, ಇತಿಹಾಸ ತಜ್ಞ ಡಿ.ಎನ್.ಸುದರ್ಶನರೆಡ್ಡಿ, ಮೂರ್ತಿ, ಮುನೀಂದ್ರ, ನಾರಾಯಣಸ್ವಾಮಿ, ಜಯಂತ್, ಕೃಷ್ಣಗೌಡ, ವೆಂಕಟೇಶ್ ಹಾಜರಿದ್ದರು.

# ಬಾರಿಸು ಕನ್ನಡ ಡಿಂಡಿಮವ

ಪ್ರತಿಯೊಬ್ಬರೂ ಮಾತೃಭಾಷೆಯನ್ನು ಪ್ರೀತಿಸುವ ಜೊತೆಗೆ ಇತರೆ ಭಾಷೆಗಳನ್ನು ಗೌರವಿಸಬೇಕು. ಭಾಷೆ ಹಾಗೂ ದೇಶಾಭಿಮಾನವನ್ನು ಬೆಳೆಸಿಕೊಂಡು ಕನ್ನಡ ಕಟ್ಟುವ ಕೆಲಸ ಮಾಡಬೇಕು. ಕೋವಿಡ್ ಸಂಕಷ್ಟದ ಸಮಯದಲ್ಲಿ ಕರೋನಾ ವಾರಿಯರ್ಸ್‌ಗೆ ಕನ್ನಡ ಸಾಹಿತ್ಯ ಪರಿಷತ್ತಿನಿಂದ ನೆರವಾಗುವುದರ ಜೊತೆಗೆ ಕೊಡಗು ಪ್ರವಾಹ ಪೀಡಿತರಿಗೆ ದೇಣಿಗೆ ಸಂಗ್ರಹಿಸಿ ನೀಡುವುದರ ಮೂಲಕ ಕಸಾಪದಿಂದ ನೂರೈವತ್ತಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ನಡೆಸಿಕೊಟ್ಟ ಕಸಾಪ ಅಧ್ಯಕ್ಷರಾದ ತ್ಯಾಗರಾಜ್‌ರವರಿಗೆ ಬೀಳ್ಕೊಡುಗೆ ಸಮಾರಂಭ ಹಾಗೂ ನಮಗೆಲ್ಲಾ ಅಭಿನಂದನಾ ಪತ್ರ ವಿತರಣೆ ಮಾಡಲಾಯಿತು.











# ರೇಷ್ಮೆ ಗಣಪತಿ

ಕೃಷಿ ವಿದ್ಯಾರ್ಥಿಗಳಾದ ನಾವು ಪರಿಸರಕ್ಕೆ ಹಾನಿಯಾಗದ ಗೌರಿ ಗಣೇಶನ ಮೂರ್ತಿ ತಯಾರಿಸುವ ಯೋಜನೆ ರೂಪಿಸಿಕೊಂಡಿದ್ದು, ಅದರಂತೆ ರೇಷ್ಮೆ ಒಂದು ಪ್ರಮುಖ ಬೆಳೆಯಾದ ಈ ಪ್ರದೇಶದಲ್ಲಿ ರೇಷ್ಮೆ ಗೂಡುಗಳನ್ನು ಬಳಸಿ ಗಣೇಶನ ಮೂರ್ತಿ ತಯಾರಿಸಿದೆವು. ಸುಮಾರು ಐದು ದಿನಗಳ ಮುಂಚೆಯೇ ಇಲಿ ಹಾಗೂ ಅಳಿಲು ತಿಂದು ಹೊರಹಾಕಿರುವಂತಹ ರೇಷ್ಮೆ ಗೂಡುಗಳನ್ನು ಸಂಗ್ರಹಿಸಿ ಅದನ್ನು ಸಂಪೂರ್ಣ ಸ್ವಚ್ಛಗೊಳಿಸಿ ಆ ಗೂಡುಗಳಿಂದ ಗಣೇಶನ ಮೂರ್ತಿಯನ್ನು ತಯಾರಿಸಿ ಗ್ರಾಮಸ್ಥರ ಮೆಚ್ಚುಗೆಗೆ ಪಾತ್ರವಾದೆವು. ವಿಶೇಷ ಆಕರ್ಷಣೆಯೆಂದರೆ ಮಹಿಳೆಯರಿಗೆ ಅರಿಷಣ ಕೊಡುವುದು ಜೊತೆಗೆ ಬೀಜದ ಉಂಡೆಗಳನ್ನು ವಿತರಿಸಿ ಪರಿಸರ ಪ್ರೇಮವನ್ನು ತೋರಿದೆವು.

ಇನ್ನೂ ಹಬ್ಬದ ಮೆರುಗು ಹೆಚ್ಚಿಸಲು ಗಣೇಶನಿಗೆ ಹಾಕುವ ಹಾರವನ್ನು ಹೂಗುಚ್ಛ ಇತರೆ ಅಲಂಕಾರಿಕ ವಸ್ತುಗಳನ್ನು ರೇಷಿಮೆ ಗೂಡಿನಿಂದಲೇ ನಾವು ತಯಾರಿಸಿ ರೇಷ್ಮೆ ಗೂಡಿನಿಂದ ಮಾಡಬಹುದಾದ ಉತ್ಪನ್ನಗಳನ್ನು ಹಾಗೂ ಅದರ ಉಪಯೋಗವನ್ನು ರೈತರಿಗೆ ತಿಳಿಸಿಕೊಟ್ಟೆವು. ಗಣೇಶನಿಗೆ ಗರಿಕೆಯಿಂದ ಮಾಲೆ ತಯಾರಿಸಿದ್ದು ವಿಶೇಷವಾಗಿತ್ತು. ಇದರಿಂದ ನಾವು ಗ್ರಾಮಸ್ಥರ ಮೆಚ್ಚುಗೆಗೆ ಪಾತ್ರವಾದೆವು.








## ನವರಾತ್ರಿಯ ಕೊನೆಯ ದಿನ




ಈ ಬಾರಿಯ ವಿಜಯದಶಮಿ ಹಬ್ಬವನ್ನು ಅರ್ಥಪೂರ್ಣವಾಗಿ ರಾವಣನನ್ನು ಸಂಹಾರ ಮಾಡುವುದರ ಮೂಲಕ ಆಚರಿಸಲಾಯಿತು. ಹಬ್ಬದ ಕೊನೆಯ ದಿನ ವಿಜಯದಶಮಿ ದಿನದಂದು ರಾಮ ರಾವಣನನ್ನು ಸಂಹಾರ ಮಾಡಿದ ದಿನ. ಈ ದಿನದಂದು ನಾವು ರಾವಣನ ಮೂರ್ತಿ ಮಾಡಿ ಹಾಗೂ ಒಬ್ಬ ಬಾಲಕನಿಗೆ ರಾಮನ ವೇಷಭೂಷಣ ಹಾಕಿ ರಾಮನ ಬಿಲ್ಲು –ಬಾಣದ ಮುಖಾಂತರ ರಾವಣ ಮೂರ್ತಿಗೆ ಅಗ್ನಿಸ್ಪರ್ಶ ಮಾಡಲಾಯಿತು. ಈ ದಿನದಂದು ನಾವು ನಮ್ಮಲ್ಲಿರುವ ನಕಾರಾತ್ಮಕ ಭಾವನೆಗಳನ್ನು ದಹನ ಮಾಡಿ ಸಕಾರಾತ್ಮಕವಾಗಿ ಚಿಂತನೆ ಮಾಡಬೇಕು ಎಂದು ಹೇಳಿದೆವು.

## ಪಾದಯಾತ್ರೆ

ಸಮಾಜ ಸೇವಕ ಸಂಚಾರಿ ಎಚ್.ಕೆ. ವಿವೇಕಾನಂದರ ನೇತೃತ್ವದಲ್ಲಿ "ಮನಸ್ಸುಗಳ ಅಂತರಂಗದ ಚಳುವಳಿ" ಪಾದಯಾತ್ರೆ 348ನೇ ದಿನ ಅಪ್ಪೇಗೌಡನಹಳ್ಳಿಗೆ ಪ್ರವೇಶಿಸಿತು. ಮಾನವನ ಮೌಲ್ಯಗಳ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಜನರ ಮನಸ್ಸಿನಾಳದ ಒಳ್ಳೆಯತನ ಜಾಗೃತಗೊಳಿಸುವ ಭರವಸೆ ಈ ಯಾತ್ರೆ ನೀಡಿದೆ ಎಂದು ಎಚ್.ಕೆ. ವಿವೇಕಾನಂದ ಅಭಿಪ್ರಾಯಪಟ್ಟರು. ಅಪ್ಪೇಗೌಡನಹಳ್ಳಿಯಲ್ಲಿ ಎಚ್.ಕೆ. ವಿವೇಕಾನಂದರವರು ಕೃಷಿ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರೊಂದಿಗೆ ಸಂವಾದ ನಡೆಸಿದರು.



# ಕೃಷ್ಣ ಜನ್ಮಾಷ್ಟಮಿ



ಊರಿನ ಜನಗಳ ಜೊತೆಗೆ ಕೃಷಿ ಜೊತೆಗೆ ಖುಷಿಯೂ ಇರಲಿ, ಎಂದು ಕೃಷ್ಣ ಜನ್ಮಾಷ್ಟಮಿ ಹಬ್ಬ ಸಂಭ್ರಮಾಚರಣೆ ಮಾಡಲಾಯಿತು. ಇದರ ಅಂಗವಾಗಿ ಒಬ್ಬ ಪುಟ್ಟ ಬಾಲಕನಿಗೆ ಕೃಷ್ಣನ ವೇಷ ಹಾಕಿ ಕೃಷ್ಣಜನ್ಮಾಷ್ಟಮಿ ಹಬ್ಬ ಆಚರಿಸಲಾಯಿತು.



# ಡೈರಿ ಬೋರ್ಡ್ ಮೀಟಿಂಗ್

ಊರಿನ ಜನರ ಜೊತೆ ಬೆರೆಯುವ ಸಲುವಾಗಿ ಎಲ್ಲಾ ವಿದ್ಯಾರ್ಥಿಗಳು ಗ್ರಾಮಪಂಚಾಯಿತಿ ಹಂಡಿಗನಾಳದ ವತಿಯಿಂದ ಅಪ್ಪೇಗೌಡನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಬಳಿ ಬೋರ್ಡ್ ಮೀಟಿಂಗ್ ಮಾಡಲಾಯಿತು. ಇದರಲ್ಲಿ ಮುಖ್ಯವಾಗಿ ವರ್ಷದ ಆದಾಯ ಹಾಗೂ ಯೋಜನೆಗಳ ಬಗ್ಗೆ ಚರ್ಚೆ ಮಾಡಲಾಯಿತು.




## ಆಡು ಆಟ ಆಡು

ಮುಂಜಾನೆಯಿಂದ ಸಂಜೆವರೆಗೂ ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಂಡು ಬೆವರು ಸುರಿಸಿ ದುಡಿಯುತ್ತಿರುವ ರೈತರಿಗೆ ಮನರಂಜನೆ ನೀಡುವ ಸಲುವಾಗಿ ಮಹಿಳೆಯರಿಗೆ ಸೂಜಿಗೆ ದಾರ ಪೋಣಿಸುವುದು ಹಾಗೂ ಮ್ಯೂಸಿಕಲ್ ಚೇರ್ ಆಟ ಆಡಿಸಲಾಯಿತು. ಪುರುಷರಿಗೆ ಮ್ಯೂಸಿಕಲ್ ಚೇರ್ ಆಟ ಆಡಿಸಿ ಸಂಭ್ರಮಿಸಲಾಯಿತು.







# ರೈತ ನುಡಿಗಳು

ಆತ್ಮೀಯರೆ

ಕೃಷಿ ವಿಶ್ವವಿದ್ಯಾಲಯ , ಬೆಂಗಳೂರು ಹಾಗೂ ಅಪ್ಪೇಗೌಡನಹಳ್ಳಿ ಗ್ರಾಮಸ್ಥರ ಸಹಕಾರದೊಂದಿಗೆ ದಿನಾಂಕ 08/11/2021 ರ ಸೋಮವಾರದಂದು " ಉಳುಮೆ ಉತ್ಸವ" ರೈತರಿಂದ, ರೈತರಿಗಾಗಿ , ರೈತರಿಗೋಸ್ಕರ ಕೃಷಿ ವಸ್ತು ಪ್ರದರ್ಶನ ಮತ್ತು ವಿಚಾರ ಗೋಷ್ಠಿ ಆಯೋಜಿಸಿರುವುದು ನಮಗೆ ಸಂತಸವಾಗಿದ್ದು ಕಾರ್ಯಕ್ರಮ ಯಶಸ್ವಿಗೆ ಶುಭಾಶಯಗಳನ್ನು ಕೋರುತ್ತೇನೆ.

ಜಿಕೆವಿಕೆ ಅಂತಿಮ ವರ್ಷದ ವಿದ್ಯಾರ್ಥಿಗಳು ತಮ್ಮ ಗ್ರಾಮೀಣ ಕೃಷಿ ಕಾರ್ಯಾನುಭವ ಚಟುವಟಿಕೆಯ ಅಂಗವಾಗಿ 03 ತಿಂಗಳು ನಮ್ಮ ಅಪ್ಪೇಗೌಡನಹಳ್ಳಿ ಗ್ರಾಮಕ್ಕೆ ಬಂದು ಗ್ರಾಮದ ಸಮಗ್ರ ಕೃಷಿ ಚಟುವಟಿಕೆ ಅಧ್ಯಯನಕ್ಕಾಗಿ ವಾಸ್ತವ್ಯ ಹೂಡಿದ್ದರು.

ಜಿಕೆವಿಕೆ ವಿದ್ಯಾರ್ಥಿಗಳು ತಮ್ಮ 03 ತಿಂಗಳ ಅಧ್ಯಯನದ ಭಾಗವಾಗಿ ವಾಸ್ತವ್ಯ ಹೂಡಿ, ಗ್ರಾಮದ ಪರಿಚಯ, ಸಂಪ್ರದಾಯ ಮುಂತಾದವುಗಳನ್ನು ಮೊದಲಿಗೆ ತಿಳಿದುಕೊಂಡು ನಂತರ ಗ್ರಾಮದಲ್ಲಿ 30 ರೀತಿಯ ಬೆಳೆ ಬೆಳೆದು ಆ ಬೆಳೆಗಳ ಬಗ್ಗೆ ವಿದ್ಯಾರ್ಥಿಗಳು ಪರಿಚಯ ಮಾಡಿದ್ದಾರೆ ಜೊತೆಗೆ ವಿದ್ಯಾರ್ಥಿಗಳು ತಾವು ಕಲಿತ ಅನೇಕ ವಿಚಾರಗಳನ್ನು ರೈತರೊಂದಿಗೆ ಹಂಚಿಕೊಂಡಿದ್ದಾರೆ.

ಬೇರೆ ಬೇರೆ ಊರು ಮತ್ತು ವಿವಿಧ ರಾಜ್ಯಗಳಿಂದ ಆಗಮಿಸಿರುವ ವಿದ್ಯಾರ್ಥಿಗಳು ಮೊದಲಿಗೆ ನಮ್ಮ ಊರಿಗೆ ಹೊಸಬರಾಗಿದ್ದರು, ನಂತರ ಒಡನಾಟದಿಂದ ನಮ್ಮ ಊರಿನ ಮನೆಮಕ್ಕಳು ಆಗಿಬಿಟ್ಟರು. ಗ್ರಾಮದಲ್ಲಿ ವಾಸ್ತವ್ಯ ಹೂಡಿ, ಗ್ರಾಮಸ್ಥರ ಪರಿಚಯ ಮಾಡಿಕೊಂಡು, ಗ್ರಾಮದ ಇತಿಹಾಸದ ಬಗ್ಗೆ, ಗ್ರಾಮದ ಕೃಷಿ ಪರಿಕರಗಳ ಬಗ್ಗೆ, ಜಾನುವಾರಗಳ ಬಗ್ಗೆ, ಗ್ರಾಮದ ಜನಸಂಖ್ಯೆ, ಗ್ರಾಮದ ನೀರಿನ ಸಂಪರ್ಕ, ಕೆರೆ, ಕುಂಟೆ, ಬೋರವೆಲ್ ಬಗ್ಗೆ , ರೇಷ್ಮೆ ಕೃಷಿ ಮತ್ತು ಹೈನುಗಾರಿಕೆ ಬಗ್ಗೆ ಸಮಗ್ರವಾಗಿ ಮಾಹಿತಿಯನ್ನು ಕಲೆಹಾಕಿದ್ದಾರೆ.

ಜಿಕೆವಿಕೆಯ 24 ಜನ ವಿದ್ಯಾರ್ಥಿಗಳು ತಮ್ಮ ತಂಡಕ್ಕೆ "ಅಭೇದ್ಯ" ಎಂದು ಹೆಸರಿಸಿದ್ದಾರೆ.

ವರ ಲಕ್ಷ್ಮಿ ಹಬ್ಬಕ್ಕೆ ಸಿರಿಧಾನ್ಯಗಳ ವರಲಕ್ಷ್ಮಿ ಮಾಡಿದ್ದಾರೆ, ಗಣೇಶ ಹಬ್ಬಕ್ಕೆ ರೇಷ್ಮೆ ಗೂಡಿನ ಗಣಪತಿ ಮಾಡಿ ನಂತರ ದೀಪಾವಳಿ ಹಬ್ಬದಂದು ಗ್ರಾಮದಲ್ಲಿ ಮನೆಗಳಿಗೆ ಗೋಮಯ ದೀಪಗಳನ್ನು ವಿತರಿಸಿ ದೀಪಗಳನ್ನು ಬೆಳಗಿಸುವ ಮೂಲಕ ದೀಪಾವಳಿ ಆಚರಿಸಿದರು.

ಗ್ರಾಮದ ಉತ್ತಮ ಪರಿಸರಕ್ಕಾಗಿ ಬೀಜದ ಉಂಡೆಗಳನ್ನು ಮಾಡಿ ಗ್ರಾಮದ ಎಲ್ಲಾ ಕಡೆಯು ಹಾಕಿ ತಮ್ಮ ಪರಿಸರ ಪ್ರೇಮವನ್ನು ಮೆರೆದಿದ್ದಾರೆ. ಸಂಜೆ ಸಭೆಗಳನ್ನು ಏರ್ಪಡಿಸಿ ವಿವಿಧ ಕೃಷಿ ವಿಷಯಗಳನ್ನು ತಿಳಿಸಿ ರೈತರಲ್ಲಿ ಆತ್ಮ ವಿಶ್ವಾಸ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಬರಡು ರಾಸುಗಳ ಉಚಿತ ಚಿಕಿತ್ಸೆ ಹಾಗೂ ರೇಷ್ಮೆ ಕೃಷಿಯ ಬಗ್ಗೆ ವಿಜ್ಞಾನಿಗಳನ್ನು ಕರೆತಂದು ರೈತರಿಗಿದ್ದ ಸಂಶಯಗಳನ್ನು ಬಗೆಹರಿಸಿ ಆತ್ಮಸ್ಥೈರ್ಯ ತುಂಬುವಲ್ಲಿ ಯಶಸ್ವಿಯಾದರು.

ತಮ್ಮ ಅಧ್ಯಯನದ ಅನುಭವ, ಗಣ್ಯರ ಭೇಟಿ, ವಿವಿದ ಚಟುವಟಿಕೆ ಮತ್ತು ಗ್ರಾಮಸ್ಥರು ತೋರಿದ ಸಹಕಾರ, ಪ್ರೀತಿ ಮಂತಾದವುಗಳ ಬಗ್ಗೆ "ಮೆಲುಕು" ಪುಸ್ತಕವನ್ನು ಉಳುಮೆ ಉತ್ಸವದಲ್ಲಿ ಗಣ್ಯರಿಂದ ಬಿಡುಗಡೆ ಮಾಡಿಸಿದ್ದಾರೆ. "ಕೃಷಿಯಿಂದ – ಖುಷಿ" ಎಂಬ ಆಡು ಮಾತಿನಂತೆ ವಿದ್ಯಾರ್ಥಿಗಳು ನಡೆದು ಸಾರ್ಥಕಗೊಳಿಸಿದ್ದಾರೆ.

ಜಿಕೆವಿಕೆ ಅಂತಿಮ ವರ್ಷದ ವಿಧ್ಯಾರ್ಥಿಗಳು ತುಂಬಾ ಸಂತೋಷದಿಂದ ನಮ್ಮ ಗ್ರಾಮದಲ್ಲಿ ಹಲವಾರು ವಿಷಯಗಳನ್ನು ಕಲಿತು, ಅನೇಕ ವಿಷಯಗಳನ್ನು ಗ್ರಾಮಸ್ಥರೊಂದಿಗೆ ಹಂಚಿಕೊಂಡು ತಮ್ಮ ಗ್ರಾಮವಾಸ್ತವ್ಯ ಜೊತೆಗೆ ಅಧ್ಯಯನವನ್ನು ಯಶಸ್ವಿ ಗೊಳಿಸಿದ್ದಾರೆ. ವಿದ್ಯಾರ್ಥಿಗಳ ಮುಂದಿನ ಹಂತದ ವ್ಯಾಸಂಗ ಯಶಸ್ವಿಯಾಗಿ ಉತ್ತಮ ಪ್ರಗತಿಪರ ರೈತರಾಗಿ ಅಥವಾ ಅಧಿಕಾರಿಗಳಾಗಿ ತಮ್ಮ ಕಾರ್ಯಕ್ಷೇತ್ರದಲ್ಲಿ ಉನ್ನತ ಮಟ್ಟಕ್ಕೆ ಏರಿ ಮಾದರಿಯಾಗಿ ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ.

ಎ.ಎಂ. ತ್ಯಾಗರಾಜ್
ಕೃಷಿಕರು
ಕರ್ನಾಟಕ ಜಾನಪದ ಪರಿಷತ್ ಅಧ್ಯಕ್ಷರು,
ಶಿಡ್ಲಘಟ್ಟ ತಾಲ್ಲೂಕು.
ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು.
ಅಪ್ಪೇಗೌಡನಹಳ್ಳಿ.

# ರೈತ ನುಡಿಗಳು

ಕೃಷಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ರಾವೇ ಕಾರ್ಯಕ್ರಮದ ಅಡಿಯಲ್ಲಿ ನಮ್ಮ ಗ್ರಾಮವಾದ ಅಪ್ಪೇಗೌಡನಹಳ್ಳಿಗೆ ಬಂದಿದ್ದು ವಿದ್ಯಾರ್ಥಿಗಳು ಗ್ರಾಮದ ರೈತರಿಗೆ ಕೃಷಿ ಸಂಬಂಧೀ ವಿವಿಧ ತಂತ್ರಜ್ಞಾನದ ಮಾಹಿತಿಯನ್ನು ತಿಳಿಸಲು ಅವರ ಪ್ರಾಧ್ಯಾಪಕರ ಸಲಹೆಯಂತೆ ವಿವಿಧ ಕಾರ್ಯಕ್ರಮ ಹಮ್ಮಿಕೊಂಡಿದ್ದು ಹೈನುಗಾರಿಕೆ, ರೇಷ್ಮೆ ಕೃಷಿ, ಒಣಬೇಸಾಯ ಪದ್ಧತಿ, ಬೀಜೋಪಚಾರ, ಆಹಾರ ಸಂಸ್ಕರಣೆ, ಬಿತ್ತನೆ ಬೀಜಗಳ ಆಯ್ಕೆ, ಕೊಳವೆ ಬಾವಿಗಳ ಮರುಪೂರಣೆ, ಮಳೆ ನೀರು ಕೊಯ್ಲುಗಳ ಬಗ್ಗೆ ಮತ್ತು ರೈತ ಮಹಿಳೆಯರಿಗೆ ವಿವಿಧ ರೀತಿಯ ಆಹಾರ ಪದ್ಧತಿಗಳ ಬಗ್ಗೆ ಸಮಗ್ರ ಮಾಹಿತಿ ನೀಡಿದ್ದು ವಿದ್ಯಾರ್ಥಿಗಳು ಅಪ್ಪೇಗೌಡನಹಳ್ಳಿ ಗ್ರಾಮದ ಪ್ರತಿಯೊಂದು ಕುಟುಂಬದ ಮನೆ ಮಕ್ಕಳ ರೀತಿಯಲ್ಲಿ ಹೊಂದಿಕೊಂಡಿರುವುದು ನಮಗೆ ಹೆಮ್ಮೆಯ ವಿಷಯವಾಗಿದೆ ಎಂದು ತಿಳಿಸಲು ಸಂತೋಷಪಡುತ್ತೇನೆ.

**ಕೆ. ವೆಂಕಟೇಶ್**
**ಗ್ರಾಮಸ್ಥರು, ಅಪ್ಪೇಗೌಡನಹಳ್ಳಿ**

ಈ ರಾವೇ ಕಾರ್ಯಕ್ರಮದ ಅಡಿಯಲ್ಲಿ ಮೂರು ತಿಂಗಳ ಕಾಲ ನಮ್ಮ ಗ್ರಾಮದಲ್ಲಿ ನೆಲಸಿದ್ದು ಕೃಷಿ ಪ್ರಾತಕ್ಷಿಕೆಗಳನ್ನು ಬೆಳೆದು ರೈತರಿಗೆ ಅನುಕೂಲವಾಗಲೆಂದು ಮತ್ತು ಆ ಬೆಳೆಗೆ ಬರುವ ಪ್ರಮುಖ ರೋಗ ಮತ್ತು ಕೀಟಗಳ ಬಗ್ಗೆ ಮತ್ತು ಅದರ ನಿರ್ವಹಣೆಯ ಬಗ್ಗೆ ತಿಳಿಸಿಕೊಟ್ಟಿದ್ದಾರೆ. ಪೋಷಕಾಂಶಗಳನ್ನು ಮತ್ತು ನೀರು ಬಿಡುವ ಸಮಯದ ಬಗ್ಗೆ ಮಾಹಿತಿ ನೀಡಿದ್ದಾರೆ. ಸಂಜೆ ಸಭೆಗಳಲ್ಲಿ ಮಹಿಳೆಯರಿಗೆ ಮತ್ತು ಪುರುಷರಿಗೆ ಉಪಯುಕ್ತ ಮಾಹಿತಿಗಳನ್ನು ನೀಡಿರುತ್ತಾರೆ. ಬರಡು ರಾಸುಗಳಿಗೆ ಚಿಕಿತ್ಸಾ ಶಿಬಿರವನ್ನು ಏರ್ಪಡಿಸಿದ್ದು ವೈದ್ಯಾಧಿಕಾರಿಗಳಿಂದ ಹಸುಗಳಿಗೆ ಬರುವ ರೋಗ ಮತ್ತು ಗರ್ಭದಾರಣೆಯ ಸಮಸ್ಯೆಗಳಿಗೆ ಪರಿಹಾರ ಮತ್ತು ಚಿಕಿತ್ಸೆಯನ್ನು ನೀಡಿರುತ್ತಾರೆ. ಸುಮಾರು ಇಪ್ಪತ್ನಾಲ್ಕು ವಿದ್ಯಾರ್ಥಿಗಳು ಊರಿನ ಎಲ್ಲಾ ಗ್ರಾಮಸ್ಥರೊಡನೆ ಬಹಳ ಅನ್ಯೋನ್ಯವಾಗಿದ್ದು ಅವರಿಗೆ ಕೃಷಿಯ ಬಗ್ಗೆ ಎಲ್ಲಾ ಮಾಹಿತಿಯನ್ನು ನೀಡಿರುವುದು ತುಂಬಾ ಸಂತೋಷದ ವಿಷಯವಾಗಿದೆ.

**ಎ. ರೋಹಿಣಿಕುಮಾರ್**
**ಗ್ರಾಮಸ್ಥರು, ಅಪ್ಪೇಗೌಡನಹಳ್ಳಿ**



ಮೆಲುಕು

## ವಿದ್ಯಾರ್ಥಿ ನುಡಿಗಳು

ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮದ ಅಡಿಯಲ್ಲಿ ಅಪ್ಪೇಗೌಡನಹಳ್ಳಿ ಗ್ರಾಮಕ್ಕೆ ಬಂದಿಳಿದ ನಮಗೆ ಹಳ್ಳಿಯ ಜನರ ಮುಗ್ಧತೆ ಹಾಗೂ ಪ್ರೀತಿಯ ಅಪ್ಪುಗೆ ಸಿಕ್ಕಿತು. ಅಂತಿಮ ವರ್ಷದ ಕೃಷಿ ಪದವೀಧರರಾದ ನಮಗೆ ಮೂರು ವರ್ಷಗಳ ಕಾಲ ಕಾಲೇಜಿನಲ್ಲಿ ನಾಲ್ಕು ಗೋಡೆಗಳ ಮಧ್ಯೆ ಕಲಿತಂತಹ ವೈಜ್ಞಾನಿಕ ಹಾಗೂ ತಂತ್ರಜ್ಞಾನದ ಪರಿಚಯವನ್ನು ಹಳ್ಳಿಯ ಜನರಿಗೆ ತಿಳಿಸಿಕೊಟ್ಟೆವು. ಸಮಗ್ರ ಕೃಷಿ ಪದ್ಧತಿಯನ್ನು ಅನುಸರಿಸುತ್ತಿರುವ ಈ ಜನ ರೇಷ್ಮೆ ಕೃಷಿ ಮತ್ತು ಹೈನುಗಾರಿಕೆಯಲ್ಲಿ ಮುಂದಿದ್ದಾರೆ. ಪುಸ್ತಕದಲ್ಲಿ ಓದಿದ ರೀತಿಯೊಂದು ಆದರೆ ರೈತರು ಸ್ವತಃ ಹೊಲದಲ್ಲಿ ಕೃಷಿ ಮಾಡುವುದನ್ನು ನೋಡಿ ಅವರಿಂದ ನಾವು ಕಲಿತು ನಮಗೆ ತಿಳಿದಿರುವ ಹೊಸ ತಳಿ ಹಾಗೂ ಕೃಷಿಗೆ ಸಂಬಂಧಪಟ್ಟ ಆಧುನಿಕ ತಂತ್ರಜ್ಞಾನವನ್ನು ತಿಳಿಸುವ ಸೌಭಾಗ್ಯ ಸಿಕ್ಕಿರುವುದು ನಮ್ಮ ಅದೃಷ್ಟವೇ ಸರಿ. ರೈತರೊಂದಿಗಿನ ಈ ಒಡನಾಟ ಜೀವನದಲ್ಲಿ ಮರೆಯಲಾಗದ್ದು. ಇಂಥದ್ದೊಂದು ಸುಂದರ ಅನುಭವವ ಪಡೆದ ನಾವೇ ಪುಣ್ಯವಂತರು.

– ಅಂಕಿತ ಸಿ.

ನಮ್ಮೂರು ಅಂದ್ರೆ ಅಪ್ಪೇಗೌಡನಹಳ್ಳಿ ಅಂತ ಹೇಳೋವಷ್ಟು ಬದಲಾಗಿದ್ದೀವಿ. ನಾನೂ ಹಳ್ಳಿಯಲ್ಲೇ ಬೆಳೆದಿದ್ದು, ಆದರೆ ಈ ಊರಿಗೆ ಬಂದಾಗ ಇಲ್ಲಿ ಜನ ಕೊಟ್ಟ ಪ್ರೀತಿ ನಮ್ಮೂರಲ್ಲೂ ಸಿಕ್ಕಿಲ್ಲ. ಅದೆಷ್ಟು ಮನೆಯಲ್ಲಿ ಊಟ ಮಾಡಿದ್ದೀವೋ, ವಾಕಿಂಗ್ ಹೋಗಿದ್ದು, ಸಂಜೆ ಸಭೆ ಮಾಡಿದ್ದು, ಸುಡುಬಿಸಿಲಲ್ಲಿ ಕೆಲಸ ಮಾಡಿದ್ದು, ಜೊತೆಗೆ ಸೇರಿ ಹಬ್ಬ ಆಚರಿಸಿದ್ದು, ತೋಟಕ್ಕೆ ಹೋಗಿದ್ದು, ದ್ರಾಕ್ಷಿ ತಿಂದಿದ್ದು ಇನ್ನೂ ಹಲವಾರು, ವಿದ್ಯಾರ್ಥಿ ಜೀವನದಲ್ಲಿ ಇಂಥಹ ಅಮೋಘ ಅನುಭವ ಪಡೆದ ನಾವೇ ಧನ್ಯರು.

–ಅರ್ಪಿತ ಯು.ಬಿ.

ನಾನು ನನ್ನ ಪದವಿ ವಿದ್ಯಾಭ್ಯಾಸದ ಮೊದಲಿನ ಮೂರು ವರ್ಷಗಳನ್ನು ತರಗತಿಯ ನಾಲ್ಕು ಗೋಡೆಗಳ ಮಧ್ಯೆ ಮುಗಿಸಿದ್ದ ಕಾರಣ, ಕೃಷಿಯ ಕುರಿತು ಪ್ರಾಯೋಗಿಕ ಜ್ಞಾನ ಹಾಗೂ ರೈತರ ಸಮಸ್ಯೆಗಳ ಬಗ್ಗೆ ಯಾವುದೇ ಅರಿವು ಇರಲಿಲ್ಲ. ಇದನ್ನು ಅರಿಯಲೆಂದೇ ನಮ್ಮ ವಿಶ್ವವಿದ್ಯಾನಿಲಯ ಈ ಅತ್ಯಂತ ಪ್ರಮುಖವಾದ ಕೃಷಿ ಚಟುವಟಿಕೆಯ ಕಾರ್ಯಾನುಭವ ಕಾರ್ಯಕ್ರಮವನ್ನು ಆಯೋಜಿಸಿದೆ. ಮೊದಲು ನಾನು ಅಪ್ಪೇಗೌಡನಹಳ್ಳಿಗೆ ಬಂದಾಗ ಹಳ್ಳಿಯ ಶುದ್ಧ ಗಾಳಿ ಹಾಗೂ ಅದ್ಭುತವಾದ ವಾತಾವರಣವನ್ನು ಅನುಭವಿಸಿದೆ. ಊರಿನ ಜನರು ನಮ್ಮನ್ನು ಸಂತೋಷದಿಂದ ಸ್ವಾಗತಿಸಿದರು. ದಿನಗಳು ಕಳೆದ ಹಾಗೆ ಈ ಊರಿನ ಹಲವಾರು ಜನರ ಪರಿಚಯವಾಯಿತು. ಹಾಗೂ ಇಲ್ಲಿನ ಮಕ್ಕಳು ಕೂಡ ನಮ್ಮ ಜೊತೆ ಚೆನ್ನಾಗಿ ಬೆರೆತರು.

ಅಪ್ಪೇಗೌಡನಹಳ್ಳಿಯ ರೈತರು ಬಹಳ ಶ್ರಮಜೀವಿಗಳು. ಈ ಭಾಗದಲ್ಲಿ ನೀರಿನ ಅಭಾವ ಇರುವ ಕಾರಣ ಹೆಚ್ಚು ವೈವಿಧ್ಯಮಯವಾದ ಬೆಳೆಗಳನ್ನು ಬೆಳೆಯಲು ಸಾಧ್ಯವಿಲ್ಲ. ಆದರೆ ಇಲ್ಲಿನ ರೈತರು ತಮ್ಮ ಬೆವರು ಸುರಿಸಿ ದುಡಿದು ಆ ವೈವಿಧ್ಯಮಯ ಬೆಳೆಗಳನ್ನು ಬೆಳೆದು ತೋರಿಸಿದ್ದಾರೆ.

ಊರಿಗೆ ಬಂದ ಒಂದೆರಡು ವಾರಗಳ ನಂತರ ನಾವು ನಮ್ಮ ಮನೆಯಲ್ಲಿ ಇರುವುದಕ್ಕಿಂತ ಊರಿನ ಜನರ ಮನೆಗಳಲ್ಲೇ ಹೆಚ್ಚು ಕಾಣಿಸಿಕೊಳ್ಳುತ್ತಿದ್ದೆವು. ನಾನು ನಗರದಲ್ಲೇ ಹುಟ್ಟಿ ಬೆಳೆದ ಕಾರಣ ಹಳ್ಳಿಯ ಈ ಸೊಗಸಾದ ಜೀವನದ ಕುರಿತು ಅರಿವಿರಲಿಲ್ಲ. ಆದರೂ ಈ ಹಳ್ಳಿಯ ಜನರು ನಮಗೆ ತೋರಿದ ಪ್ರೀತಿಯ ಕಾರಣ ನಾನು ನಮ್ಮ ಮನೆಯಲ್ಲಿಯೇ ಇದ್ದೀನೆಂಬ ಭಾವನೆ ಮೂಡಿಸಿತು.

ನಮಗೆ ಯಾವುದೇ ತೊಂದರೆ ಇದ್ದರೂ ಊರಿನ ಜನರು ನಮಗಾಗಿ ಬಂದು ಆ ತೊಂದರೆಯನ್ನು ನಿವಾರಿಸುತಿದ್ದರು. ಈ ಹಳ್ಳಿ ಹಾಗೂ ಹಳ್ಳಿಯ ಜನರು ನನಗೆ ತೋರಿಸಿದ ಪ್ರೀತಿಯನ್ನು ನಾನು ಎಂದೂ ಮರೆಯಲಾರೆ. ಹಾಗೂ ನಾನು ಹೆಮ್ಮೆಯಿಂದ ಇದು ನಮ್ಮ ಊರು, ನಮ್ಮ ಅಪ್ಪೇಗೌಡನಹಳ್ಳಿ ಎಂದು ಹೇಳಲು ಬಯಸುತ್ತೇನೆ. ನಾನು ಈ ಅವಕಾಶವನ್ನು ಊರಿನ ಪ್ರತಿಯೊಬ್ಬರಿಗೂ ನನ್ನ ಧನ್ಯವಾದಗಳನ್ನು ತಿಳಿಸಲು ಇಚ್ಛಿಸುತ್ತೇನೆ.

ಭರತ್ ಕುಮಾರ್ ಎಸ್.

## ವಿದ್ಯಾರ್ಥಿ ನುಡಿಗಳು

ರಾವೇ ಅಂತ ಅಂದ್ರೆ ಎಲ್ಲರ ತರಹಾನೇ ನನಗೂ ಒಂದು ಕಲ್ಪನೆ ಇತ್ತು. ಆದರೆ ಇಂತಹ ಒಂದು ಅಮೋಘ ಅನುಭವ ನಮಗಾಗಿ ನಮ್ಮ ಅಪ್ಪೇಗೌಡನಹಳ್ಳಿಯಲ್ಲಿ ಎದುರು ನೋಡ್ತಾಯಿತ್ತು ಅಂತ ಯಾರೂ ಅಂದುಕೊಂಡಿರಲಿಲ್ಲ ಅಂತ ಅನಿಸುತ್ತೆ. ನಾವು ನಮ್ಮ ವಿದ್ಯಾರ್ಥಿ ಜೀವನದಲ್ಲಿ ಏನೆಲ್ಲಾ ಕಲಿತಿದ್ದರೂ ಈ ಮೂರು ತಿಂಗಳ ಅವಧಿಯಲ್ಲಿ ಕಲಿತ ಜೀವನಪಾಠ, ಮೌಲ್ಯಗಳು ನಮ್ಮ ಮುಂದಿನ ಭವಿಷ್ಯಕ್ಕೆ ಅಪೂರ್ವವಾದ ಕೊಡುಗೆಯನ್ನು ನೀಡುತ್ತೆ. ಅಂತ ನಾನು ಭಾವಿಸಿದ್ದೇನೆ. ರೈತರ ಕಷ್ಟಗಳನ್ನು ನಾವು ಪುಸ್ತಕದಲ್ಲಿ ಓದುವುದಕ್ಕಿಂತ ಕಣ್ಣಾರೆ ಕಂಡು ಅದನ್ನು ಜೀವಿಸಿದ್ದೇವೆ. ಅದು ನಮಗೆ ರಾವೇ ಹೊರತಾಗಿ ಬೇರೆಲ್ಲೂ ಸಿಗುತ್ತಿರಲಿಲ್ಲ ಎಂದು ಅನಿಸುತ್ತದೆ. ಹಳ್ಳಿಯಲ್ಲಿ ರೈತರೊಂದಿಗೆ ನಮ್ಮ ಒಡನಾಟ ಹೇಗಿತ್ತು ಎಂದರೆ ಎಲ್ಲರೂ ನಮ್ಮನ್ನು ಮನೆ ಮಕ್ಕಳ ಹಾಗೆ ಕಾಣುತ್ತಿದ್ದರು. ನಮಗೆ ನಮ್ಮ ಮನೆಗಳನ್ನೇ ಮರೆಸುವಷ್ಟು ಪ್ರೀತಿಯನ್ನು ಅವರು ಕೊಟ್ಟು ಅವರಲ್ಲಿ ನಮ್ಮನ್ನು ಒಬ್ಬರಾಗಿ ಕಂಡರು. ಅದು ನಮ್ಮ ಸೌಭಾಗ್ಯ. ಎಂಥಹದ್ದೇ ಸಂದರ್ಭದಲ್ಲೂ ಕಷ್ಟಗಳನ್ನು ನಿಭಾಯಿಸಿ ದೇಶಕ್ಕೆ ಅನ್ನಕೊಟ್ಟು ಮುಗುಳುನಗುವ ರೈತ ನಮಗೆಲ್ಲಾ ಮಾದರಿ. ಇಂಥಹದ್ದೊಂದು ಮಹೋನ್ನತ ಅನುಭವ ಪಡೆಯಲು ಅನುವು ಮಾಡಿಕೊಟ್ಟ ನಮ್ಮ ಕಾಲೇಜಿಗೆ ಧನ್ಯವಾದಗಳು ಹಾಗೂ ರೈತರೊಂದಿಗೆ ರೈತರಾಗಿ ಬೆರೆತು ಜೀವಿಸಿದ ಹೆಮ್ಮೆ ನಮಗಿದೆ.

-ಬಿಂದು ಆರ್.

### RAWE review

The study of agriculture as a science, art and business always had a wider implication, beyond the restricted walls of a lecture room. The juxtaposition of theoretical knowledge along with practical applications is a concept which clearly resonates with agriculture. As an integral part of the student READY curriculum, the RAWE programme aims to provide the agricultural students a holistic approach to the natural setting of the village situations, enabling them to work alongside the villagers and collaborate with them to use various extension tools for solving the complex rural problems and disseminating knowledge along with it.

As students of cluster 1, group 1, the allotment of the village Appe gowdanahalli in Chikkbalapura district, Karnataka was nothing short of extraordinary. The village was surveyed with precision and the data collected were analysed to trace the inherent socio-economic problems pertaining to this rural paradigm. The students demonstrated the perfect application of theoretical knowledge in identifying the agricultural problems, and their potential solutions using locally available low cost technologies, which were recommended along with actionable implementation plans. The students learnt how to face unforeseeable circumstances and to minutely monitor the changing socio-economic ad technological aspects of the fam families, meanwhile bridging the gaps in knowledge as and when discovered, using a plethora of extension tools. The professors played a pivotal role by augmenting the students with their professional knowledge and rich experience that has accumulated over years of service.

At a standpoint where bird's eye view of the entire series of events is possible to experience, the RAWE programme has been instrumental in improving a lot of aspects in every student, both at a professional and spiritual level. Without even a miniscule amount of doubt, it is thus possible to conclude the RAWE experience has been an extremely enriching and enticing one both for the students and villagers alike.

-Attiso Bhowmick

# ಫೋಟೋ ಗ್ಯಾಲರಿ!



ಒಂದು ಮುಗುಳುನಗೆ...!



ಪರಂಪರೆ




ದೇವರ ಬೆಳಕು




ರೂಪ ರೂಪಗಳನು ದಾಟಿ...!



ಪಯಣ




ಒಂದು ಭೇಟಿ...!



ಧ್ಯಾನ



ಸ್ವಾಗತ


ಅಬ್ದುಲ್ಲಾ ದಾರಾಷಿಕೋ


ಐಶ್ವರ್ಯ ಚಂದ್ರಹಾಸನ್


ಆಕಾಶ್ ಎಂ ಎಸ್


ಆಕಾಶ್ ಎಸ್ ಡಿ


ಅಲಂಕೃತ


ಅಂಕಿತ ಸಿ


ಅನುಭ ಪಾಂಡೆ


ಅರವಿಂದ ನಾಯ್ಕ್ ಪಿ


ಅರ್ಪಿತ ಯು ಬಿ


ಅರುಂಧತಿ ವರ್ಮ


ಅತ್ರಿಸ್ರೋ ಭೌಮಿಕ್


ಬಸವರಾಜ ಧನ್ವಂತರಿ


ಭಾರತ್ ಡಿ


ಭರತ್ ಕುಮಾರ್ ಎಸ್


ಬಿಂದು ಆರ್


ಛಾಯ ಬಿ ಸಿ


ದೀಪ್ತಿ ವಿ ದೇವಸುರ್


ಆದರ್ಶ್ ಸಿ ಎನ್


ಆರವ್ ಕುಮಾರ್


ಹಂಸ ಶ್ರೀ



ಚೈತ್ರ ಕೆ ಟಿ


ಅತೀಶ್ ಮೂರ್ತಿ


ಅನುಷಾ ಯು ಟಿ


ದೇವರಾಜ್ ಎಚ್ ಆರ್

# ಪ್ರಾಧ್ಯಾಪಕರ ಭೇಟಿ

ಕೃಷಿ ವಿಜ್ಞಾನಿಗಳ ಭೇಟಿ ಹಾಗೂ ವಿಚಾರ ವಿನಿಮಯ









# ಉಳುಮೆ ಉತ್ಸವ





ಶಿಡ್ಲಘಟ್ಟ ತಾಲ್ಲೂಕಿನ ಅಪ್ಪೆಗೌಡನಹಳ್ಳಿ ಗ್ರಾಮದ ಶಾಲಾ ಆವರಣದಲ್ಲಿ ಕೃಷಿ ವಿಶ್ವವಿದ್ಯಾನಿಲಯ ಜಿಕೆವಿಕೆ ಬೆಂಗಳೂರು,ರೈತ ಸಂಪರ್ಕ ಕೇಂದ್ರ ಶಿಡ್ಲಘಟ್ಟ,ಗ್ರಾಮ ಪಂಚಾಯತಿ ಹಂಡಿಗನಾಳ,ಹಾಲು ಉತ್ಪಾದಕರ ಸಹಕಾರ ಸಂಘ ಅಪ್ಪೆಗೌಡನಹಳ್ಳಿ ಹಾಗೂ ಗ್ರಾಮಸ್ಥರ ಸಹಯೋಗದೊಂದಿಗೆ ಕೃಷಿ ವಸ್ತುಪ್ರದರ್ಶನ ಮತ್ತು ವಿಚಾರ ಗೋಷ್ಠಿ ಸಮಾರಂಭವನ್ನು ಆಯೋಜಿಸಿದ್ದವು.

ರೈತರಿಗೆ ಸಂಭಂದಿಸಿದ ಕೃಷಿ ವಸ್ತುಪ್ರದರ್ಶನ ಸುಮಾರು 25 ಮಳಿಗೆಗಳಿದ್ದವು.ವಿದ್ಯಾರ್ಥಿಗಳು ವಿನೂತನ ಪ್ರಯೋಗದಿಂದ ಹಿಡಿದು ಮಣ್ಣಿನ ಗುಣಧರ್ಮ,ಪೋಷಕಾಂಶಗಳ ಲಭ್ಯತೆ,ನೀರಿನ ಲಭ್ಯತೆ ಹಾಗೂ ಗುಣಮಟ್ಟ,ಬೇಸಾಯ ಮಾಡುವ ಬೆಳೆಗಳಿಗೆ ನೀರಿನ ಹಾಗೂ ಪೋಷಕಾಂಶಗಳ ಅವಶ್ಯಕತೆ, ಕಳೆ ನಿರ್ವಹಣೆ ನಿಖರ ಬೇಸಾಯದ ಬೆಳೆ ಉತ್ಪಾದನೆಯಲ್ಲಿ ಮಾಹಿತಿ ಮತ್ತು ತಂತ್ರಜ್ಞಾನ ರೈತರಿಗೆ ಸಂಭಂದಿಸಿದ ಮಾಹಿತಿ ನೀಡಿ ರೈತರಿಗೆ ಸುಲಭವಾಗಿ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಮಾರ್ಗದರ್ಶನ ನೀಡಿದರು.

ನಮ್ಮ ಸಹಪಾಠಿಯಾದ ಬಸವರಾಜ್ ಧನ್ವಂತರಿ ನಾವು ಊರಲ್ಲಿ ವಾಸವಾಗಿದ್ದ ಸುಧೀರ್ಘ 90 ದಿನಗಳ ಮಾಡಿದ ಕೆಲಸ ಕಾರ್ಯಗಳು ಮತ್ತು ಏರ್ಪಡಿಸಿದ ಸಭೆ ಸಮಾರಂಭಗಳ ಕುರಿತು ವರದಿ ಮಂಡಿಸಿದನು.

ರೈತರ ಕೃಷಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸದ ಸರ್ಕಾರ ರೈತರು ಕಷ್ಟಪಟ್ಟು ಬೆಳೆದ ಬೆಳೆಗಳಿಗೆ ಬೆಂಬಲ ಬೆಲೆ ನಿಗದಿ ಮಾಡದೆ ಬೀದಿಗೆ ಬಿಟ್ಟಿದ್ದಾರೆ ಎಂದು ಸುಗಟುರು ಕೆ.ಅಮರನಾರಾಯಣ ಬೇಸರ ವ್ಯಕ್ತಪಡಿಸಿದರು.

ಕೃಷಿ ಚಟುವಟಿಕೆಯಾದಾರಿತ 'ಮೆಲುಕು' ಎಂಬ ಪುಸ್ತಕವನ್ನು ಮುತ್ತೂರು ಗ್ರಾಮದ ಮೇಜರ್ ಸುನಿಲ್ ಕುಮಾರ್ ರವರು ಬಿಡುಗಡೆ ಮಾಡಿ ಶುಭ ಕೋರಿದರು. ಈ ಸಂದರ್ಭದಲ್ಲಿ ಡಾ.ಭೈರೇಗೌಡ ಡೀನ್ ವಿದ್ಯಾರ್ಥಿ ಕಲ್ಯಾಣ,ಶಾಲಾ ಮುಖ್ಯೋಪಾಧ್ಯಾಯಿನಿ ವೆಂಕಟ ರತ್ನಮ್ಮ,ಗ್ರಾಮ ಪಂಚಾಯತಿ ಅಧ್ಯಕ್ಷರು ಮುನಿರೆಡ್ಡಿ,ಜಿಲ್ಲಾ ಪಂಚಾಯತಿ ಉಪ ಕಾರ್ಯದರ್ಶಿ ಶಿವಕುಮಾರ,ಕೃಷಿ ವಿಸ್ತರಣಾ ವಿಜ್ಞಾನಿ ಡಾ.ವೈ.ಎನ್.ಶಿವಲಿಂಗಯ್ಯ,ಮಾಜಿ ತಾ.ಪಂ.ಸ. ಲಕ್ಷ್ಮೀನಾರಾಯಣ ರೆಡ್ಡಿ,ರೇಷ್ಮೆ ಇಲಾಖೆ ನಿರ್ದೇಶಕರು ತಿಮ್ಮರಾಜು,ಕೃಷಿ ಅಧಿಕಾರಿ ಪ್ರವೀಣ್ ಕುಮಾರ್,ಕನ್ನಡ ಜಾನಪದ ಸಾಹಿತ್ಯ ಪರಿಷತ್ ಅಧ್ಯಕ್ಷ ಎ.ಎಂ.ತ್ಯಾಗರಾಜ್,ಗ್ರಾ.ಪಂ.ಸ. ಮುನಿಂದ್ರ,ದ್ಯಾವಪ್ಪ,ಜಯರಾಂ, ಪಿ.ಎಲ್. ಡಿ ಬ್ಯಾಂಕ್ ನಿರ್ದೇಶಕ ಮಂಜುನಾಥ,ಮಕ್ಕಳ ಕಲ್ಯಾಣ ಇಲಾಖೆಯ ಮಹೇಶ,ಕೆ.ಎಂ.ಎಫ್. ನ ಮಂಜುನಾಥ, ಇಫ್ಕೋ ಸಂಸ್ಥೆಯ ಚೇತನ್ ಕುಮಾರ್, ಪಶುವೈದ್ಯಾಧಿಕಾರಿ ಕೆ.ತಿಮ್ಮರಾಜು ಗ್ರಾಮಸ್ಥರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಸಂತಸದ ಕ್ಷಣಗಳು...

ಹಳ್ಳಿ ವಾಸ್ತವ್ಯದ ಕೊನೆಯ ದಿನದ ಅಂಗವಾಗಿ ಶಾಲಾ ಆವರಣದಲ್ಲಿ ಗಿಡ ನೆಟ್ಟು
ಶಾಲಾ ಮಕ್ಕಳಿಗೆ ಪುಸ್ತಕ ವಿತರಣೆ ಮಾಡಿದ
ಸಂತೋಷ ಎಲ್ಲರ ಮುಖದಲ್ಲಿ....





# ಬೀಳ್ಕೊಡುಗೆ

ಹಳ್ಳಿಯ ವಾಸ್ತವ್ಯ ಮುಗಿಸಿ ಹೊರಡುವಾಗ ಎಲ್ಲರ ಕಣ್ತುಂಬಿದ ಕ್ಷಣಗಳು!
ವಿದ್ಯಾರ್ಥಿಗಳು ತಮಗೆ ಸಹಕಾರ ನೀಡಿದ ಎಲ್ಲಾ ಗಣ್ಯರಿಗೂ
ಸಸಿಗಳನ್ನು ನೀಡುವ ಮೂಲಕ ಧನ್ಯವಾದಗಳನ್ನು ಅರ್ಪಿಸಿದರು.
ಗ್ರಾಮಸ್ಥರು ವಿದ್ಯಾರ್ಥಿಗಳನ್ನು ನೆನಪಿನ ಕಾಣಿಕೆಯೊಂದಿಗೆ ಸುಂದರ ನೆನಪುಗಳೊಂದಿಗೆ ಬೀಳ್ಕೊಟ್ಟರು.









